(SRI A. G. RAMACHANDRA RAO.)

34 Vidyavardhaka Sangha High School, Mandi Mohalla, Mysore.
35 Vijaya High School, Pandavapura.
36 High School, Channarayapatna.
37 S.S.K.B.M. High School, Shantigrama.
38 National High School, Shimoga.
39 Sri Talalabalu Jagadguru High School, Sirigere.
40 Rashtriya Proudah Vidyasala, Malladihalli, Holalkere Taluk.
41 Jaya Bharathi Co-operative Society High School, Attibele, Anekal Taluk.
42 Nehru High School, Amruthur, Kunigal Taluk.
43 Ganapathi High School, Hebbur, Tumkur Taluk.
44 R.V.P. High School, Y. N. Hosakote, Pavagada Taluk.
45 Sri Yadusaila High School, Thirunarayanapuram, Melkote.
46 Azad High School, Bangalore City.
47 Mysugar High School, Mandya.

Girls' High Schools.

1 St. Euphrasia's Girls' High School, Civil Area, Bangalore.
2 Goodwill High School, Civil Area, Bangalore.
3 Sm. Rajamma Thambu Chetty Girls' High School, Civil Area, Bangalore.
4 Sm. Kamala Bai's Girls' High School, Civil Area, Bangalore.
5 Bishop Cotton Girls' High School, Civil Area, Bangalore.
6 Baldwin Girls' High School, Civil Area, Bangalore.
7 Sacred Heart Girls' High School, Civil Area, Bangalore.
8 St. Francis Xavier's Girls' High School, Civil Area, Bangalore.
9 Mitralaya Girls' High School, Bangalore City.
10 Mahilaseva Samaja Girls' High School, Bangalore City.
11 St. Theresa's Girls' High School, Bangalore City.
12 Acharya Patasala Girls' High School, Bangalore City.
13 Maharastra Mahila Vidyalaya High School, Bangalore City.
14 Methodist Girls' High School, Kolar.
15 Christ the King Convent, Mysore.
16 Good Shepherd Convent, Mysore.
17 St. Mary's High School, Chamundipuram, Mysore.
18 St. Joseph's Convent High School, Mandya.
19 Girls' High School, Bhadravathi.
20 Mary Immaculate Girls' High School, Shimoga.
21 St. Joseph's Convent Girls' High School, Chickmagalur.
22 St. Pauls' Convent Girls' High School, Chickmagalur.
23 St. Charles High School, Ulsoor, Bangalore.
24 St. Philomena's Girls' High School, Hassan.
25 Sri Vani Vilas Urdu Girls' High School, Mysore.

Statement showing names of Private Colleges in the State :—

1 St. Philomena's College, Mysore.
2 Sharadavilas College, Mysore.
3 D. Banumiah's College, Mysore.
4 National Institute of Engineering, Mysore.
5 National College, Bangalore.
6 Vijaya College, Bangalore.
7 Basappa Intermediate College, Bangalore.
8 B. M. S. College of Engineering, Bangalore.
9 St. Jeseph's College, Bangalore.
10 Mount Carmel College, Bangalore.

MR. SPEAKER.—Now the House will rise and meet again at 10-30.

The House adjourned for Lunch at Ten of the Clock and re-assembled at Thirty Minutes past Ten of the Clock.

[MR. SPEAKER in the Chair.]

MYSORE CO-OPERATIVE SOCIETIES (AMENDMENT) BILL, 1954.

Motion to consider (contd.).

MR. SPEAKER.—Now the discussion on Mysore Co-operative Societies (Amendment) Bill will continue.

***SRI R. ANANTARAMAN** (Chamarajapet).—Mr. Speaker, Sir, my friends who have spoken earlier have pointed out the lacuna in the whole Act itself. I do not want to touch upon those things that have been already suggested by

my friends. I wish only to say that what I wanted to say has already been brought to the notice of the House regarding the state of affairs of the co-operative societies in Mysore State which is not sound as compared to the Bellary Taluk which has now been added on to Mysore. I was in Bellary only last month and I got very good report about co-operative societies that are working there. I am told also that the President and Secretaries there are carrying on very well and there is that atmosphere of co-operation. But as compared to Bellary Taluk, though there are 4000 co-operative societies, I am very sorry to say that only half-a-dozen of them are working very well. Others are not working very well. You know, Sir, ours is a co-operative republic and our Constitution is based on that principle; and it is very necessary that we have to devote much attention to co-operative societies. The Hon'ble Doctor comes from Bellary and he was a Minister in Madras also. He knows the working of the co-operative societies there and I am sure under his able guidance the co-operative societies here will once again work very well and bring a very good name to our State. Meanwhile, Sir, my friends have also pointed out that there are many cases of misappropriation, particularly misappropriation in the society in the Russel Market and also irregularities in the Apex Bank which is a central bank for Mysore. I do not know why Government should hesitate to take action against those particular officers and functionaries and even against directors also to some extent. They say they are still investigating. My friends also suggested that Government may not at all take action against these particular persons and it may not do good to the State. It is better therefore that action is taken, cases are also filed against them and money also collected by way of surcharge. I am also told, Sir, that there is no sufficient audit staff to go round the co-operative societies and audit the accounts. Two years ago, I happened to be a director of a certain bank in Bangalore. Even for one or two years no officer came to audit the accounts even once. There was a requisition from societies, but there was no sufficient number of audit officers. It is therefore necessary that Government should instruct the Registrar of Co-operative Societies to see that the auditors are sent in time and the entire accounts are audited. Some friend already was suggesting that if there was insufficiency of auditors, why not we appoint some more auditors and see that the auditing is done every year regularly. In fact I may tell my friend coming from mofussil that there are many co-operarative societies whose accounts are not audited for 8 to 10 years. It is therefore necessary that the Hon'ble Minister should take particular interest to see that auditors are appointed and some arrangements are made to see that auditing is done every year regularly so that there will be no complaint next year. I am sure that this Bill will certainly help the Registrar and also the Government to take necessary action against persons who are guilty of misappropriation of huge sums of money. It will help the co-operative movement in Mysore State to work better.

With these few words I welcome this Amendment Bill.

*ಶ್ರೀ ಡಿ. ದೇವರಾಜ್ ಅರಸ್ (ಹುಣಸೂರು).— ಸ್ವಾಮಿ, ಈ ತಿದ್ದುಪಡಿ ಮಸೂದೆಯನ್ನು ತಂದಿರತಕ್ಕಂಥ ಮಾನ್ಯ ಸಚಿವರಾದ ಡಾ॥ ನಾಗನೆಗೌಡರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಅವರು ಇಲ್ಲಿ ನಮ್ಮ ಮೈಸೂರು ದೇಶದ ಸಚಿವರಾಗುವುದಕ್ಕೆ ಮುಂಚೆ ಬಳ್ಳಾರಿ ಪ್ರಾಂತ್ಯದಲ್ಲಿ, ಮದರಾಸು ಪ್ರಾಂತ್ಯದಲ್ಲಿ ಈ ಕೋ-ಆಪರೇಟಿವ್ ಮೂವ್‌ಮೆಂಟ್ ಯಾವ ರೀತಿ ನಡೆಯುತ್ತಾ ಇದೆ, ಎಷ್ಟು ಮಟ್ಟಿಗೆ ಯಶಸ್ವಿಯಾಗಿದೆ ಎಂಬ ಅನುಭವವನ್ನು ಚೆನ್ನಾಗಿ ಪಡೆದಿದ್ದಾರೆ. ಆ ಅನುಭವದ ಜೊತೆಗೆ ನಮ್ಮ ಮೈಸೂರು ಸಂಸ್ಥಾನದಲ್ಲಿ ಈಗ ಕೆಲವು ದಿವಸಗಳಿಂದದೀಚೆಗೆ ಸ್ವಲ್ಪ ಅನುಭವವನ್ನು ಪಡೆದು ಪ್ರಕೃತದಲ್ಲಿ ಇರತಕ್ಕ ಅಕ್ಕು ಇದ್ದಹಾಗೆಯೇ ಇದ್ದ ಪಕ್ಷದಲ್ಲಿ ಈ ಕೊ-ಆಪರೇಟೀವ್ ಸೊಸೈಟಿಗಳ ಮೂವ್‌ಮೆಂಟು ದೇಶದಲ್ಲಿ ಅಭಿವೃದ್ಧಿ ಆಗುವುದಕ್ಕೆ ಹೆಚ್ಚು ಅಡಚಣೆಗಳಿವೆ ಎಂಬುದನ್ನು ಚೆನ್ನಾಗಿ ಮನಗಂಡು, ಕೆಲವು ತಿದ್ದುಪಾಟುಗಳು ಈ ಸೊಸೈಟಿಗಳ ಅಭಿವೃದ್ಧಿ ದೃಷ್ಟಿಯಿಂದ ಶುಂಬಾ ಅವಶ್ಯಕ ಎಂಬುದನ್ನು ತಿಳಿದು ಈ ತಿದ್ದುಪಾಟುಗಳನ್ನು ತಂದಿದ್ದಾರೆ. ಮಾನ್ಯ ಸ್ನೇಹಿತರನೇಕರು ಈ ತಿದ್ದುಪಾಟುಗಳು ಅನಾವಶ್ಯಕ, ಅನ್‌ಡೆಮೋಕ್ರಾಟಿಕ್ಕು, ಇತ್ಯಾದಿ, ಇತ್ಯಾದಿ ಕೆಲವು ಟೀಕೆಗಳನ್ನು ಮಾಡಿದ್ದಾರೆ. ಸ್ವಾಮಿ, ಈ ಟೀಕೆಗಳನ್ನು ಮಾಡಿದಂಥ ಮಾನ್ಯ ಸದಸ್ಯರು ಶ್ರೀವಾ॥ ಶ್ರೀನಿವಾಸ ಅಯ್ಯಂಗಾರ್‌ರವರು ಮಾತನಾಡಿದಂಥ ಕಾಲದಲ್ಲಿ ನಾನು ಇರಲಿಲ್ಲ. ಶ್ರೀವಾ॥ ಶ್ರೀನಿವಾಸ

(ಶ್ರೀ ಡಿ. ದೇವರಾಜ್ ಅರಸ್.)

ಅಯ್ಯಂಗಾರ್‌ರವರಂಥ ಅನುಭವನ್ನರು ಇಂಥಾ ನರ್ಸರಿಗೂ ಉಪಯುಕ್ತವಾದಂಥ ತಿದ್ದುಪಡಿಯನ್ನು ತಂದಿರತಕ್ಕ ಕಾಲದಲ್ಲಿ ಏಕೆ ತೀವ್ರವಾಗಿ ಇಷ್ಟು ವಿರೋಧ ಮಾಡಿದರು ಅನ್ನುವುದೇ ನನಗೆ ಆಶ್ಚರ್ಯ. ಕೋ-ಆಪರೇಟಿವ್ ಮೂವ್‌ಮೆಂಟು ಕೆಲವಾರು ವರ್ಷಗಳಿಂದೀಚೆಗೆ ಎಲ್ಲಾ ತಾಲ್ಲೂಕುಗಳಲ್ಲಿ, ಎಲ್ಲಾ ಹೋಬಳಿಗಳನ್ನೂ ಒಳಗೊಂಡಿದೆ. ತಮಗೇ ಗೊತ್ತಿರುವಹಾಗೆ, ಸ್ವಾಮಿ, ಪ್ರತಿ ತಾಲ್ಲೂಕಿನಲ್ಲೂ ಒಂದು ತಾಲ್ಲೂಕು ಮಲ್ಟಿಪರ್‌ಪಸ್ ಸೊಸೈಟಿಯನ್ನು ಸ್ಥಾಪನೆ ಮಾಡಿದರು. ಅದರ ಅನುಭವದ ಮೇಲೆ ಪ್ರತಿ ಹೋಬಳಿ, ನರ್ಕಲ್‌ನಲ್ಲೂ ಕೂಡ ಸರ್ಕಲ್ ಸೊಸೈಟಿಗಳು ಸ್ಥಾಪನೆ ಆದವು. ಹಾಗೆ ನಾವಿರಾರು ಕೋ-ಆಪರೇಟಿವ್ ಸೊಸೈಟಿಗಳು ಕೆಲವಾರು ವರ್ಷಗಳಿಂದೀಚೆಗೆ ನಮ್ಮ ಸಂಸ್ಥಾನದಲ್ಲಿ ಸ್ಥಾಪನೆ ಆಗಿ ಕೆಲವೇ ವರ್ಷಗಳಲ್ಲಿ ಆ ಸಂಸ್ಥೆಗಳಲ್ಲಿ ಜನರಿಗೆ ಇದ್ದಂಥ ನಂಬಿಕೆ ಸಂಪೂರ್ಣವಾಗಿ ಹಾಳಾಗುವುದಕ್ಕೆ ಅವಕಾಶ ಉಂಟಾಗಿದೆ. ಸೊಸೈಟಿಗಳನ್ನು ಸ್ಥಾಪನೆ ಮಾಡುವ ಕಾಲದಲ್ಲಿ ಹಿನ್ನೆಲೆ ಏನು ಎಂಬುದನ್ನೂ ಕೂಡ ನೀವು ಈ ಸಂದರ್ಭದಲ್ಲಿ ಸ್ವಲ್ಪ ಸ್ಮರಿಸಿಕೊಳ್ಳಬೇಕಾದ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ. ಸೊಸೈಟಿಗಳು ಎಲ್ಲಾ ಕಡೆಯೂ ಸ್ಥಾಪಿತವಾಗಬೇಕು ಎಂಬ ಒಂದು ದೃಷ್ಟಿಯಿಂದ ಮತ್ತು ಕಂಜ್ಯೂಲ್ ಇದ್ದಂಥ ಕಾಲದಲ್ಲಿ ಹಳ್ಳಿಗಳೆಲ್ಲಕ್ಕೂ ಸೊಸೈಟಿಗಳ ಮೂಲಕ ರೇರ್ಷ ಹಂಚಿಕೆ ಆಗಬೇಕು ಎಂಬ ದೃಷ್ಟಿಯಿಂದ ಈ ಮಲ್ಟಿಪರ್‌ಪಸ್ ಕೋ-ಆಪರೇಟಿವ್ ಸೊಸೈಟಿಗಳನ್ನು ಎಲ್ಲ ಕಡೆಯೂ ಸ್ಥಾಪನೆ ಮಾಡಿದರು. ಸ್ಥಾಪನೆ ಮಾಡುವ ಕಾಲದಲ್ಲಿ ಸ್ಥಳದ ಮುಖಂಡರು, ಸ್ಥಳದ ಅಧಿಕಾರಿಗಳು ಎಲ್ಲರೂ ಸೇರಿ, ಇಂಥ ಸೊಸೈಟಿಗಳ ಅವಶ್ಯಕತೆ ಇದೆ, ಇದನ್ನು ನಾವು ಸ್ಥಾಪನೆ ಮಾಡಬೇಕು, ಜನರೆಲ್ಲರೂ ಇದಕ್ಕೆ ಸಹಾಯಮಾಡಬೇಕು, ಷೇರುದಾರರಾಗಬೇಕು ಎಂದು ಹೇಳಿ ಬಲವಾದ ಪ್ರಾಪಗ್ಯಾಂಡಾ ನಡೆಸಿ ಈ ಸಂಸ್ಥೆಗಳಿಗೆ ಜನರೆಲ್ಲರೂ ಷೇರುದಾರರಾಗುವುದಕ್ಕೆ ಸಹಾಯಮಾಡಿದರು. ಆಗ ಈ ಸೊಸೈಟಿಗಳಿಗೆ ಪುರೋಭಿವೃದ್ಧಿ ಚೆನ್ನಾಗಿ ಆಗುತ್ತದೆ, ನಾವು ಈ ಸೊಸೈಟಿಗಳಿಗೆ ಷೇರುದಾರರಾದ ಪಕ್ಷದಲ್ಲಿ ಈ ಸೊಸೈಟಿಗಳ ಮೂಲಕವೇ ನಮಗೆ ಬೇಕಾದಂಥ ಸಾಮಾನುಗಳು ಒದಗಿಸಲ್ಪಡುತ್ತವೆ, ಆದ್ದರಿಂದ ತುಂಬಾ ಅನುಕೂಲತೆ ಇದೆ ಎಂದು ಹೇಳಿ ಆಗ ಜನಗಳಿಗೆ ಭರವಸೆ ಕೊಟ್ಟಿದ್ದಾಯಿತು. ಈಗಿನ ಪರಿಸ್ಥಿತಿ ಏನಾಗಿದೆ ಎಂದರೆ, ಕಂಟ್ರೋಲ್ ಇರುವವರೆಗೂ, ಸರ್ಕಾರದವರು ಕಂಟ್ರೊಲ್ಡ್ ಕಮಾಡಿಟೀಸ್ ಎಲ್ಲವನ್ನು ಕೂಡ ಈ ಸೊಸೈಟಿಗಳ ಮೂಲಕ ಹಂಚಿಕೆ ಮಾಡುತ್ತಾ ಇದ್ದವರೆಗೂ ಹೇಗೋ ಈ ಸೊಸೈಟಿಗಳು ನಡೆದುಕೊಂಡು ಬಂದವು. ಇತ್ತೀಚೆಗೆ ಕಂಟ್ರೋಲ್ ವಜಾ ಆದಮೇಲೆ ಈ ಸಾಮಾನುಗಳನ್ನು ಸೊಸೈಟಿಯವರು ತಾವೇ ಸ್ವಂತವಾಗಿ ತೆಗೆದುಕೊಂಡು ಬಂದು ಮಾರಾಟ ಮಾಡುವುದಕ್ಕೆ ಬಂಡವಾಳವಿಲ್ಲದೆ ಈ ಸೊಸೈಟಿಗಳೆಲ್ಲಾ ಕ್ಷೀಣ ಸ್ಥಿತಿಗೆ ಬರುವುದಕ್ಕೆ ಒಂದು ಕಾರಣ ಆಯಿತು. ಜೊತೆಗೆ ಈ ಸೊಸೈಟಿಗೆ ಸೆಕ್ರೆಟರಿ, ಪ್ರೆಸಿಡೆಂಟರವರು ಮತ್ತು ಡೈರೆಕ್ಟರ್‌ಗಳು ಇದ್ದಾರೆಯಲ್ಲಾ ಅವರುಗಳು ಮೊದಲೇನೋ ಚುನಾವಣೆಯಿಂದ ಅಧಿಕಾರ ವರ್ಗಕ್ಕೆ ಬಂದಿದ್ದರೂ ಕೂಡ ಅನೇಕ ವರ್ಷಗಳಿಂದಲೂ ಅವರೇ ಅಲ್ಲಿ ಮನೆ ಮಾಡಿಕೊಂಡುಬಿಟ್ಟಿದ್ದಾರೆ. ಈ ರೀತಿಯಾಗಿ ಬೇರೂರಿಕೊಂಡು ಆ ಸೊಸೈಟಿಯಲ್ಲಿ ಅನೇಕ ವಿಧವಾದಂಥ ಅವ್ಯವಸ್ಥೆಗೆ ಕಾರಣರಾಗಿದ್ದಾರೆ, ಎಷ್ಟೋಕಡೆ misappropriation ಕೂಡ ಆಗಿದೆ. ಸ್ವಾಮಿ, ಹೀಗೆ ಅವ್ಯವಸ್ಥೆಯಾಗಿ ಈ ಹಳ್ಳಿಯಲ್ಲಿರತಕ್ಕ ಷೇರುದಾರರು ಏನು ಹೇಳುತ್ತಾ ಇದ್ದಾರೆಂದರೆ: ''ಸ್ವಾಮಿ, ನಮಗೆ ಲಾಭ ಇಲ್ಲದೇ ಇದ್ದರೂ ಪರವಾಗಿಲ್ಲ, ನಾವು ಷೇರುದುಡ್ಡು ಕೊಟ್ಟದ್ದೇವಲ್ಲಾ ಅದನ್ನು ಕೊಡಿಸುವುದಕ್ಕೆ ಏನಾದರೂ ಸಾಧ್ಯವೇ'' ಎಂದು ಕೇಳುತ್ತಿದ್ದಾರೆ. ಆ ಷೇರು ದುಡ್ಡು ಕೊಡಬೇಕಾದರೆ ಜನರಲ್ ಬಾಡಿ ಮೀಟಿಂಗ್ ಮಾಡಿ, ಆ ಮೀಟಿಂಗ್‌ನಲ್ಲಿ, ಅವ್ಯವಸ್ಥೆಯೋ, ವ್ಯವಸ್ಥೆಯೋ, ಅದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆಮಾಡಿ, ದುಡ್ಡು ತಿಂದುಹಾಕಿದ್ದಾರೆಯೇ, ಷೇರುದುಡ್ಡು ಇದೆಯೇ ಇಲ್ಲವೇ, ಇದನ್ನೆಲ್ಲಾ ಕಂಡುಹಿಡಿದು ಆಮೇಲೆ ಅವರ ಷೇರು ಹಣ ಕೊಡುವುದನ್ನೋ ಬಿಡುವುದನ್ನೋ ತೀರ್ಮಾನ ಮಾಡಬೇಕು. ಅವರಿಗೆ ಇಷ್ಟೆಲ್ಲಾ ಗೊತ್ತಾಗುವುದಿಲ್ಲ, ಅಂತೂ ನಮಗೆ ದುಡ್ಡು ಕೊಡಿಸಿ ಎಂದು ಒಂದು ಮಾತ್ರ ಹೇಳುತ್ತಾರೆ. ಒಂದುವೇಳೆ ವ್ಯವಸ್ಥಿತವಾಗಿ ಸೊಸೈಟಿ ನಡೆಯದೇಹೋದಪಕ್ಷದಲ್ಲಿ ಅದನ್ನು ಮುಚ್ಚಿ ಅದಕ್ಕೆ ಬದಲಾಗಿ, ಇನ್ನಾವುದಾದರೂ ಧರ್ಮ ಕಾರ್ಯಕ್ಕಾದರೂ ಹಣ ಕೊಡಿ ಎಂದು ಕೇಳುತ್ತಾ ಇದ್ದಾರೆ. ಆದರೆ ಯಾವುದನ್ನು ಮಾಡುವುದಕ್ಕೂ ರಿಜಿಸ್ಟ್ರಾರ್‌ರವರನ್ನು ಕೇಳಬೇಕು. 'ಅನೇಕ ಸೊಸೈಟಿಗಳು ಹಾಳಾಗುತ್ತಾ ಇದೆಯಲ್ಲಾ ನೀವು ಕಾರ್ಯಕ್ರಮ ತೆಗೆದುಕೊಳ್ಳಬಾರದೇ' ಎಂದು ಕೇಳಿದರೆ, ಅವರು 'ಕಾನೂನುಪ್ರಕಾರ ನಾವು ನೇರವಾಗಿ, quick ಆಗಿ, ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ನಮಗೆ ಸಾಧ್ಯವಿಲ್ಲ; ಕಾನೂನಿನಲ್ಲಿ ತಮಗೆ ಹೆಚ್ಚಿನ ಅಧಿಕಾರವಿಲ್ಲದೇ ಇರುವುದರಿಂದ ತುಂಬಾ ಕಷ್ಟವಾಗಿದೆ, ಏನು ಮಾಡುವುದಕ್ಕೂ ಸಾಧ್ಯವಾಗುತ್ತಾ ಇಲ್ಲ' ಎಂದು ಒಂದು ಕಡೆ ತಮ್ಮ inability plead ಮಾಡುತ್ತಾ ಇದ್ದಾರೆ. ಇಂಥ ಒಂದು ನಂದಿಗ್ಧ ಪರಿಸ್ಥಿತಿಯೊಳಗೆ ಈ ಸೊಸೈಟಿಗಳು ನಮ್ಮ ದೇಶದಲ್ಲಿವೆ. ಇವೆಲ್ಲವನ್ನೂ ಅನುಭವಮಾಡಿ ಈ ಅನುಭವದ ಪರಿಣಾಮವಾಗಿಯೇ ಈ ತಿದ್ದುಪಡಿ ತಂದಿರತಕ್ಕಂಥಾದ್ದು. ಇದನ್ನು ಅಡೆಮೋಕ್ರಾಟಿಕ್, ಕೂಡದು ಎಂದು ಹೇಳುತ್ತಾರೆ! ಸ್ವಾಮಿ, ಡೆಮಾಕ್ರೆಸಿಗೆ ಒಂದು ರಕ್ಷಣೆಯನ್ನುಂಟುಮಾಡತಕ್ಕಂಥ ಈ ಸೊಸೈಟಿಗಳು ಸುವ್ಯವಸ್ಥಿತವಾಗಿ ನಡೆಯುವುದಕ್ಕೆ ಕಾನೂನನ್ನು ಮಾಡಿದರೆ ಇದು ಅಡೆಮೋಕ್ರಾಟಿಕ್ ಎಂದು ಯಾರಾದರೂ ಭಾವಿಸಿದರೆ ಅದೇಕೆ ಆ ರೀತಿ ಭಾವಿಸುತ್ತಾರೋ ನಮಗೆ ಅರ್ಥವಾಗುವುದಿಲ್ಲ. ನಮ್ಮ ಸ್ಥಳದಲ್ಲೇನೆ ಅನೇಕ ಸೊಸೈಟಿಗಳು ಹೀನಸ್ಥಿತಿಯಲ್ಲಿವೆ. ನಾವು ಎಷ್ಟೋ ಸಲ ರಿಜಿಸ್ಟ್ರಾರ್‌ರವರಿಗೆ ದೂರು ಕೊಟ್ಟರೂ ಕೂಡ ಅವರು ತಾವೇನು ಮಾಡುವುದಕ್ಕೂ ಸಾಧ್ಯವಿಲ್ಲ ಎಂದು ಹಿಂದುಮುಂದೆ ನೋಡುತ್ತಿದ್ದಾರೆ; ಒದ್ದಾಡುತ್ತಿದ್ದಾರೆ. ಸೊಸೈಟಿಗಳು ಸುವ್ಯವಸ್ಥಿತವಾಗಿ ನಡೆಯುವುದಕ್ಕೆ, ಜನಗಳಲ್ಲಿ ಒಂದು ವಿಧವಾದ ನಂಬಿಕೆಯುಂಟಾಗುವುದಕ್ಕೆ ಜರೂರಾಗಿ ಕೆಲವು ಕಾರ್ಯಗಳನ್ನು ಕೈಕೊಳ್ಳಬೇಕಾದದ್ದು ತೀರ ಅವಶ್ಯಕವಾಗಿತ್ತು. ಮುಖ್ಯವಾಗಿ ''ಉದ್ದೇಶಗಳು ಮತ್ತು ಕಾರಣಗಳ ವಿವರ''ದಲ್ಲಿ ಕೆಲವು ಮಾತನ್ನು ಹೇಳಿದ್ದಾರೆ. ಏನೆಂದರೆ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದವರು ಷಾರ್ಟ್ ಟರ್ಮ್ ಲೋನ್ಸ್ ಕೊಡುವುದಕ್ಕೆ ಸಾಲವನ್ನು ಕೊಡಲು ಒಪ್ಪಿದ್ದಾರೆ, ಅದನ್ನು ನಾವು ಉಪಯೋಗಿಸಿಕೊಳ್ಳಬೇಕು ಮತು ಇನ್ನುಮೇಲೆ ಎಲ್ಲಾಕಡೆಯೂ

ವ್ಯವಸಾಯಗಾರರಿಗೆ ಷಾರ್ಟ್ ಟರ್ಮ್ ಸಾಲ ಸಿಕ್ಕುವುದಕ್ಕೆ ನಾವು ಸೊಸೈಟಿಗಳನ್ನು ತೆರೆಯ ಬೇಕು ಎಂದು ಹೇಳಿದ್ದಾರೆ. ಈ ರೀತಿಯಾಗಿ ವ್ಯವಸಾಯಗಾರರಿಗೆ ಷಾರ್ಟ್ ಟರ್ಮ್ ಕ್ರೆಡಿಟ್ ಸಿಕ್ಕುವ ವ್ಯವಸ್ಥೆ ಮಾಡುತ್ತಿರುವುದು ಇದೇ ಮೊದಲು. ಇದುವರೆಗೆ ಅಡಮಾನದ ಬ್ಯಾಂಕುಗಳು ಎಲ್ಲಾ ಕಡೆಯೂ ಕೆಲಸ ಮಾಡುತ್ತಿದ್ದುವು. ಆ ಬ್ಯಾಂಕುಗಳಲ್ಲಿ ಷಾರ್ಟ್ ಟರ್ಮ್ ಸಾಲ ಕೊಡುವ ವ್ಯವಸ್ಥೆಯಿರಲಿಲ್ಲ. ಯಾವನಾದರೂ ಒಬ್ಬ ಮನುಷ್ಯ ಈ ಬ್ಯಾಂಕಿನಿಂದ ಸಾಲ ಪಡೆಯಬೇಕಾದರೆ ಆತ ಹಿಂದೆ ಸಾಲ ಮಾಡಿರಬೇಕು. ಆ ರೀತಿ ಹಿಂದೆ ಮಾಡಿದ ಸಾಲವನ್ನು ತೀರಿಸುವುದಕ್ಕೆ ಸಾಲ ಪಡೆಯಲು ಅವಕಾಶವಿತ್ತು. ಅಷ್ಟುಮಿನಾ ಷಾರ್ಟ್ ಟರ್ಮ್ ಕ್ರೆಡಿಟ್ ಅಂದರೆ ನಾಳೆ ವ್ಯವಸಾಯಕ್ಕೆ ದುಡ್ಡು ಬೇಕಾದರೆ, ಖರ್ಚಿಗೆ ಆರು ತಿಂಗಳವರೆಗೆ ಅಥವಾ ಒಂದು ವರ್ಷದ ಅವಧಿಯಲ್ಲಿ ಸಾಲ ಪಡೆಯಬೇಕಾಗಿದ್ದರೆ, ಆಗ ರೈತರಿಗೆ ಸಾಲ ಪಡೆಯುವುದಕ್ಕೆ ಯಾವ ವಿಧವಾದ ಬ್ಯಾಂಕಿನ ವ್ಯವಸ್ಥೆಯೂ ಇರಲಿಲ್ಲ. ಈಗ ಷಾರ್ಟ್ ಟರ್ಮ್ ಸಾಲ ರೈತರಿಗೆ ಸಿಕ್ಕುವುದಕ್ಕೆ ಆ ರೀತಿಯಾದ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ಪ್ರಯತ್ನಮಾಡಿದ್ದಾರೆ. ಇದಕ್ಕೆ ರಿಸರ್ವ್ ಬ್ಯಾಂಕಿನವರೂ ಕೂಡ ಸಾಲ ಕೊಡುವುದಕ್ಕೆ ಒಪ್ಪಿದ್ದಾರೆ. ಈ ಷಾರ್ಟ್ ಟರ್ಮ್ ಸಾಲಗಳನ್ನು ಕೊಡುವಾಗ ಈ ನಬೀಸಾಗಿ ರೈತರಿಂದ ಹಿಂದಕ್ಕೆ ಸರ್ಕಾಲದಲ್ಲಿ ಪಾವತಿಯಾಗತಕ್ಕದ್ದು ಕೂಡ ತೀರ ಅವಶ್ಯಕವಾಗಿದೆ. ಹೀಗೆ ಸರ್ಕಾಲದಲ್ಲಿ ಪಾವತಿಯಾಗದೆ ಈಗ ಮಾನ್ಯ ನಭೆಗೆ ಗೊತ್ತಿರುವ ಹಾಗೆ ಅಡಮಾನದ ಬ್ಯಾಂಕುಗಳಲ್ಲಿ ಯಾವ ರೀತಿಯಾಗಿ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟು ಸಾಲ ಹಿಂದಕ್ಕೆ ಬಾರದೆ ಅಥವಾ ಬ್ಯಾಡ್ ಡೆಟ್ ಎಂದು ರೈಟ್ ಆಫ್ ಮಾಡುವುದು ಅಥವಾ ಯಾವ ಕ್ರಮ ತೆಗೆದುಕೊಳ್ಳುವುದಕ್ಕೂ ಆಗದೆ ನುಮ್ಮನೆ ಬಿಟ್ಟುಕೊಂಡು ಬಂದಿರುವಂಥ ಒಂದು ದೊಡ್ಡ ಅವ್ಯವಸ್ಥೆ ಈಗಿರುವುದು ಮುಂದು ವರಿದರೆ, ಸೊಸೈಟಿಗಳಲ್ಲಿ ಅಥವಾ ಬ್ಯಾಂಕುಗಳಲ್ಲಿ ಈ ಅವಸ್ಥೆಯಾದರೆ ಈ ಸಾಲ ದೊರೆಯುವುದು ಕೂಡ ನಿಲ್ಲುತ್ತದೆ. ಈ ಮಾತನ್ನು ಉದ್ದೇಶಗಳು ಮತ್ತು ಕಾರಣಗಳ ವಿವರದಲ್ಲಿ ನಮೂದು ಮಾಡಿದ್ದಾರೆ.

> "In the event of default, the Reserve Bank stops further credit to the constituency concerned and heavy penalties are imposed for each day's delay in clearing the outstandings."

ಎಂದು ಹೇಳಿದೆ. ಈ ರೀತಿಯಾದ ಒಂದು ಅಪಘಾತ ವಿದೆ. ಸ್ವಾಮಿ, ಹಳ್ಳಿಯಲ್ಲಿ ಒಂದು ಗಾದೆಯಿದೆ. ಯಾರನ್ನಾದರೂ ಹಾಳುಮಾಡಿ ಕೆಡಿಸಬೇಕು ಎಂದು ಒಬ್ಬ ಬಡವನಮೇಲೆ ಕಣ್ಣಿಟ್ಟರೆ, ಅವನಿಗೆ ಸಾಲ ಕೊಟ್ಟು ಅನೇಕ ವರ್ಷಗಳವರೆಗೆ ಕೇಳದೆ ನುಮ್ಮನಿದ್ದರೆ ಅವನನ್ನು ಹಾಳುಮಾಡುವುದಕ್ಕೆ ಅದು ಬಹಳ ಸುಲಭವಾದ ಮಾರ್ಗ. ಏಕೆಂದರೆ ವರ್ಷೇ ವರ್ಷೇ ಬರುವ ಬಡ್ಡಿಯನ್ನು ವಸೂಲು ಮಾಡದೆ ಹತ್ತಾರು ವರ್ಷಗಳು ನುಮ್ಮನೆ ಬಿಡುವುದು, ಆ ಬಡ್ಡಿ ಬೆಳೆದು ಒಟ್ಟಿಗೆ ಸೇರಿ ಸಾವಿರ ರೂಪಾಯಿಗಳವರೆಗೆ ಅಕ್ಯೂಮುಲೇಟ್ ಆದಾಗ ದಾವಾ ವಗೈರೆ ನಡೆಸಿ ಅವನ ಆಸ್ತಿ ಬರ ಮಾಡಿಕೊಳ್ಳುವುದಕ್ಕೆ ಒಂದು ಮಾರ್ಗ ಎಂದು ಅನೇಕರು ಒಂದು ಬುದ್ಧಿವಂತಿಕೆಯನ್ನು ಕಂಡು ಹಿಡಿದು ಅನೇಕರ ಮನೆಮಠಗಳನ್ನು ವಶಪಡಿಸಿ ಕೊಂಡಿದ್ದಾರೆ. ಹೀಗೆ ನಾವು ಷಾರ್ಟ್ ಟರ್ಮ್ ಸಾಲವನ್ನಾಗಲಿ ಅಥವಾ ಲಾಂಗ್ ಟರ್ಮ್ ಸಾಲ ವನ್ನಾಗಲಿ ಕೊಟ್ಟು ವಸೂಲು ಮಾಡುವುದನ್ನು ಸಾವಧಾನವಾಗಿ ಮಾಡುವುದರಿಂದ ಅಥವಾ ಸರಿಯಾದ ರೀತಿಯಲ್ಲಿ ಜಾಗ್ರತೆ ಬರಮಾಡಿಕೊಳ್ಳದೆ ಉದಾಸೀನ ಮಾಡುವುದರಿಂದ ಜನರಿಗೆ ಉಪಕಾರ ಮಾಡಿದ ಹಾಗಾಗುವುದಿಲ್ಲ. ಅದರಿಂದ ಉತ್ತರೋತ್ತರ ಸಾಲ ತೆಗೆದುಕೊಂಡವರಿಗೆ ತೊಂದರೆಗಳು ಜಾಸ್ತಿಯಾಗುತ್ತವೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದಕಾರಣ ಈ ರೀತಿಯಾದ ಸ್ಪ್ರಿಂಜೆಂಟ್ ಮೆಷರ್ಸ್ ಇದ್ದರೇನೇ ಈ ಷಾರ್ಟ್ ಟರ್ಮ್ ಸಾಲಗಳು ನಬೀಸಾಗಿ ಹಳ್ಳಿಗಳಿಂದ ಬರುವುದಕ್ಕೆ ಅವಕಾಶವಾಗುತ್ತದೆ, ಇಂಥ ಅವಕಾಶಗಳನ್ನು ಕಲ್ಪಿಸಿ ಕೊಡುವುದರಲ್ಲಿ ನಾವು ತೀರ ಆಸಕ್ತಿಯುಳ್ಳವರಾಗಿರಬೇಕು ಎಂದು ಭಾವಿಸುತ್ತೇನೆ.

ಎಂಟನೆಯ ಸೆಕ್ಷನ್ ತಿದ್ದುಪಡಿಯು ಬಹಳ ಸಾಧುವಾದುದೆಂದು ತಿಳಿಯುತ್ತೇನೆ. ಒಂದೇ ಕಡೆ ಇರತಕ್ಕಂಥ ಹಳ್ಳಿಗಳ ಗ್ರೂಪಿನ ನಿವಾಸಿಗಳು ಆಯಾ ನ್ಥಳದ ಬ್ಯಾಂಕಿನ ಮೆಂಬರುಗಳಾಗಲು ಅರ್ಹತೆಯುಳ್ಳವರಾಗುತ್ತಾರೆ, ಇತರರು ಯಾರಾದರೂ ಆ ಸೊಸೈಟಿ ಅಥವಾ ಬ್ಯಾಂಕಿನ ಮೆಂಬರಾಗಬೇಕಾದರೆ ರಿಜಿಸ್ಟ್ರಾರ್‌ರವರು ಅಪ್ಪಣೆಮಾಡಬೇಕು ಎಂದು ಕೆಲವು ನಿಬಂಧನೆಗಳನ್ನು ಇಲ್ಲಿ ಹೊಸದಾಗಿ ನಮೂದಿಸಿದ್ದಾರೆ. ಇದು ತುಂಬ ಸಾಧುವಾದದ್ದು. ಏಕೆಂದರೆ ನಾಲ್ಕಾರು ಹಳ್ಳಿಗಳಿಗೆ ಸಂಬಂಧಪಟ್ಟಹಾಗೆ ಒಂದು ಷಾರ್ಟ್ ಟರ್ಮ್ ಸಾಲ ಕೊಡುವ ಸೊಸೈಟಿ ಸ್ಥಾಪಿಸಿದ್ದೇ ಆದರೆ ಅಲ್ಲಿ ಸುಲಭ ದರದಲ್ಲಿ ಕೂಡಲೆ ಸಾಲ ಸಿಕ್ಕುತ್ತದೆಂದು ವ್ಯವಸಾಯಗಾರರಲ್ಲದಿರುವವರೂ ನದನ್ಯರಾಗಿ ಆ ಸೊಸೈಟಿಯ ಅನುಕೂಲತೆ ಪಡೆದು ದುಡ್ಡನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ಅವಕಾಶವಿರುತ್ತದೆ. ಈ ಅವಕಾಶವನ್ನು ಖಂಡಿತವಾಗಿಯೂ ತಪ್ಪಿಸಬೇಕು. ನಮ್ಮ ಯಾವ ಒಂದು ಉದ್ದೇಶ, ಇದುವರೆಗೆ ಯಾವ ಸಹಾಯವೂ ಇಲ್ಲದೇನೆ ನೇರವಾಗಿ ಸುಲಭದರದಲ್ಲಿ ತಕ್ಷಣವೇ ಸಾಲ ಬೇಕಾದರೆ ಸಿಕ್ಕದೇನೆ ತುಂಬ ದುಡ್ಡಿರುವವರ ಹಿಡಿತಕ್ಕೆ ಸಿಕ್ಕಿ ಅನೇಕ ನಂದರ್ಭಗದಲ್ಲಿ ಕಷ್ಟಪಟ್ಟಿರುವ ರೈತರಿಗೆ ಈ ದಿವನ ಇಂಥ ಸಾಲವನ್ನು ಷಾರ್ಟ್ ಟರ್ಮ್ ಕ್ರೆಡಿಟ್ ಸೊಸೈಟಿ ಸ್ಥಾಪಿಸಿ ಅದರ ಮೂಲಕ ದೊರೆಯುವಂತೆ ಮಾಡಬೇಕೆಂದೇನಿದೆಯೋ ಅದು ನಾರ್ಥಕವಾಗಬೇಕು. ಇತರ ಜನರು ಅಂದರೆ ವ್ಯವನಾಯಗಾರರಲ್ಲದಿರುವವರು, ವ್ಯಾಪಾರಸ್ಥರು ಇನ್ನೂ ಇತರ ಉದ್ಯೋಗದವರು ತಾವು ನದನ್ಯರಾಗಿ ನಿಜವಾದ ವ್ಯವಸಾಯಗಾರರಿಗೆ, ಯಾರು ಈ ಬ್ಯಾಂಕಿನಿಂದ ನಹಾಯಪಡೆಯುವುದಕ್ಕೆ ಅರ್ಹತೆಹೊಂದಿರುವರೋ ಅವರಿಗೆ ಈ ಸಾಲ ದೊರೆಯದಹಾಗೆ ಮಾಡುವುದಕ್ಕೆ ಅವಕಾಶವಿದೆ. ಅಂಥ ಜನರು, ವ್ಯವನಾಯಗಾರರಲ್ಲದವರು ಈ ಸೊಸೈಟಿ ನದನ್ಯರಾಗುವುದಕ್ಕೆ ಅವಕಾಶ ಕೊಡದರೀತಿಯಲ್ಲಿ ವ್ಯವಸ್ಥೆ ಮಾಡಬೇಕಾದದ್ದು ಅಗತ್ಯವಾಗಿದೆ.

ಇನ್ನು ಮುಖ್ಯವಾಗಿ ಒಂದು ಬದಲಾವಣೆಯನ್ನು ಒರಿಜಿನಲ್ ಆಕ್ಟಿನ 44ನೆಯ ನೆಕ್ಷನ್‌ನಲ್ಲಿ ಮಾಡಿದ್ದಾರೆ. ಒರಿಜಿನಲ್ ನೆಕ್ಷನ್ ಈ ರೀತಿಯಾಗಿದೆ :—

> "Section 44 :—If, in the opinion of the Registrar, the Committee of any registered society is not

(ಶ್ರೀ ಡಿ. ದೇವರಾಜ್ ಅರಸ್.)

functioning properly, he may after giving an opportunity to the committee to state its objections, if any, and after considering the objections raised, call upon the members of the society to appoint another committee in such time as may be fixed by him. If the members fail to appoint a committee which, in the opinion of the Registrar, is likely to function satisfactorily and the Registrar is of opinion that in the circumstances of the case, it is undesirable to order the cancellation of the registration of the society he may, by order in writing, dissolve the committee and appoint a suitable person or persons to manage the affairs of the society for a specified period not exceeding one year. The period specified in such order may, at the discretion of the Registrar, be extended from time to time, provided that such order shall not remain in force for more than two years in the aggregate."

ನಬ್ ಸೆಕ್ಷ್ ಒಂದರಲ್ಲಿ ಕೆಲವು ಮಾತುಗಳನ್ನು ಬಿಡ ಬೇಕೆಂದು ತಿದ್ದುಪಡಿ ತಂದಿರುವುದು ಈ ರೀತಿ ಯಾಗಿದೆ :—

"The words beginning from 'call upon the members of the society' and ending with 'it is undesirable to order the cancellation of the registration of the society' shall be omitted."

ಈ ರೀತಿಯಾಗಿ ಇಷ್ಟು ಪದಗಳನ್ನು ಬಿಟ್ಟ ಪಕ್ಷದಲ್ಲಿ ಇದರ ಅರ್ಥವೇನಾಗುತ್ತದೆಯೆಂದರೆ, ರಿಜಿಸ್ಟ್ರಾರ್ ರವರು ಯಾವುದಾದರೂ ಒಂದು ಕಮಿಟಿ ಸರಿಯಾಗಿ ಕೆಲಸಮಾಡದೇ ಹೋದ ಪಕ್ಷದಲ್ಲಿ ಆ ಸೊಸೈಟಿಯ ಸದಸ್ಯರನ್ನು ಕರೆದು "ಬೇರೊಂದು ಸಮಿತಿಯನ್ನು ನೀವು ನೇಮಿಸಬೇಕು" ಎಂದು ಕೇಳಬಹುದು. ಒಂದು ವೇಳೆ ಆ ರೀತಿಯಾಗಿ ರಿಜಿಸ್ಟ್ರಾರ್‌ರವರು ಸೂಚನೆ ಕೊಟ್ಟಮೇಲೆ ಆ ಸದಸ್ಯರು ಸರಿಯಾಗಿ ರಿಜಿಸ್ಟ್ರಾರ್‌ರವರಿಗೆ ಸಮರ್ಪಕವಾದ ಒಂದು ಸಮಿತಿ ಯನ್ನು ನೇಮಿಸದೇ ಹೋದ ಪಕ್ಷದಲ್ಲಿ ಆ ಸಮಿತಿ ಯನ್ನು ವಜಾಮಾಡಿ ಪುನಃ ಇನ್ನಾರಾದರೂ ಬೇರೆ ಯವರನ್ನು ರಿಜಿಸ್ಟ್ರಾರ್‌ರವರು ನೇಮಕಮಾಡ ಬಹುದು ಎಂದು ಹಿಂದಿನ ಕಾನೂನಿನಲ್ಲಿದೆ. ಈಗ ಈ ರೀತಿಯಾಗಿ ಪುನಃ ಹೊಸದಾಗಿ ಇನ್ನೊಂದು ಸಮಿತಿ ಏರ್ಪಾಡುಮಾಡಿ ಎಂದು ಹೇಳುವುದನ್ನು ಬಿಟ್ಟುಬಿಡಿ ಎಂದು ತಿದ್ದುಪಡಿ ತಂದಿದ್ದಾರೆ. ಇದಕ್ಕೆ ಬಹಳವಾಗಿ ವಿರೋಧ ಸೂಚಿಸಲ್ಪಟ್ಟಿದೆ. ಮಾನ್ಯ ಸದಸ್ಯರನೇಕರು ಇದು ಕೂಡದು, ಈ ರೀತಿಯಾದ ಒಂದು ತಿದ್ದುಪಡಿ ಇರಕೂಡದು, ಇದು ರಿಜಿಸ್ಟ್ರಾರವರಿಗೆ ವಿಪರೀತವಾಗಿ ಒಂದು ಪ್ರಾಬಲ್ಯವನ್ನು ಕೊಡುತ್ತದೆ, ಅಧಿಕಾರವನ್ನು ಕೊಡುತ್ತದೆ ಎಂದು ಟೀಕೆ ಮಾಡಿದ್ದಾರೆ.

11 A.M.

ಯಾವುದಾದರೂ ಸೊಸೈಟಿ ಅವ್ಯವಸ್ಥೆಯಲ್ಲಿದ್ದರೆ ಅದರಮೇಲೆ ಅಧಿಕಾರವನ್ನು ಚಲಾಯಿಸುವುದಕ್ಕೂ ಕೂಡ ಸರಿಯಾದ ಅವಕಾಶವಿಲ್ಲದೆ, ಯಾವ ರೀತಿಯ ಕಾರ್ಯಕ್ರಮ ಕೈಗೊಳ್ಳುವುದಕ್ಕೂ ಕಷ್ಟವಾಗಿತ್ತು ಎಂಬುದು ರಿಜಿಸ್ಟ್ರಾರ್‌ರವರಿಗೆ ಅವರ ಅನುಭವದಿಂದ ವ್ಯಕ್ತಪಟ್ಟಿದೆಯೆಂದು ನಾನು ತಿಳಿಯುತ್ತೇನೆ. ಈಗ ಹಳ್ಳಿಗಳಲ್ಲಿ ಹೊಸದಾಗಿ ಮಲ್ಟಿಪರ್ಪಸ್ ಸೊಸೈಟಿ ಗಳಾಗಿರುವ ಕಡೆಯಲ್ಲಿ ಒಂದು ಸಾರಿ ಸದಸ್ಯರಾದ ಮೇಲೆ ಒಂದು ಸಾರಿ ಆ ಸ್ಥಳದ ಮುಖಂಡರನ್ನು ಡೈರೆಕ್ಟರುಗಳನ್ನಾಗಿಯೋ, ಪ್ರೆಸಿಡೆಂಟರನ್ನಾಗಿಯೋ ಮಾಡಿದಮೇಲೆ, ಪುನಃ ರಿಜಿಸ್ಟ್ರಾರ್‌ರವರೇ ಆಗಲಿ ಯಾರೇ ಆಗಲಿ, ಅವರನ್ನು ಬದಲಾಯಿಸಿ ಹೊಸ ಸಮಿತಿಯನ್ನು ರಚಿಸಬೇಕೆಂದು ಅಲ್ಲಿಯ ಜನರಿಗೆ ತಿಳಿವಳಿಕೆ ಕೊಟ್ಟರೂ ಪುನಃ ಪುನಃ ಇವರುಗಳೇ ಅದಕ್ಕೆ ಚುನಾಯಿತರಾಗಿ ಬರುವ ಅನೇಕ ನಿದರ್ಶನ ಗಳಿವೆ.

Mr. SPEAKER.—No time. We have to hurry up.

Sri Mulka GOVINDA REDDY (Chitaldrug).—This is a legislative measure and an important measure too. Members must be given ample opportunities to express their views.

Sri D. DEVARAJ URS.—I have no mind to drag on my speech on this Bill for any length of time. If it is the wish of the House that this Bill should go to the Select Committee and therefore the debate on it should close at this stage alone, I am prepared to close my speech shortly, in a few minutes.

ಈ ರೀತಿಯಾಗಿ ಅನೇಕ ಕಡೆ ಸಮಿತಿಯ ಸದಸ್ಯರು ತಾವು ತಪ್ಪಿತಸ್ಥರಾಗಿದ್ದರೂ ಸಹ, ರಿಜಿಸ್ಟ್ರಾರ್‌ರವರ ದೃಷ್ಟಿಯಲ್ಲಿ ಅವರಿಗೆ ಬದಲು ಬೇರೆ ಜನರು ಆಸ್ಥಾನ ಗಳಿಗೆ ಬರಬೇಕೆಂಬ ಅಪೇಕ್ಷೆ ಇದ್ದರೂ, ಸಾಮಾನ್ಯ ಜನರು ಬೇರೆ ಜನರನ್ನು ಆಸ್ಥಾನಗಳಿಗೆ ಚುನಾಯಿಸು ವುದು ತುಂಬಾ ಕಷ್ಟವಾಗುತ್ತದೆ. ಇದು ಅನುಭವದ ಮಾತು. ತಾವು ಹೇಳಬಹುದು, democratic principles ಪ್ರಕಾರ ಯಾರನ್ನು ಬೇಕಾದರೂ ಚುನಾಯಿಸಿ ತರಬಹುದು ಎಂದು. ಸ್ವಾಮಿ, ಹಳ್ಳಿಯಲ್ಲಿ ಜನರಸ್ಥಿತಿ, ಅವರ ತಿಳಿವಳಿಕೆಯ ಮಟ್ಟ, ಸ್ಥಳದ ಮುಖಂಡರ ಪ್ರಭಾವಕ್ಕೆ ಒಳಗಾಗಿರುವ ವಿಚಾರವನ್ನು ತಿಳಿದ ಮಹನೀಯರು ಅಂಥ ಕಡೆಗಳಲ್ಲಿ democracy ಹೇಗೆ ಕೆಲಸಮಾಡುತ್ತದೆ ಎಂಬುದನ್ನು ಚೆನ್ನಾಗಿ ಅರಿಯಬಹುದು. ಯಾರು ಸ್ಥಳದಲ್ಲಿ ಪ್ರಭಾವಶಾಲಿಗಳಾಗಿರುತ್ತಾರೋ, ಯಾರು ಮಾತು ಬಾರಿ ಮನುಷ್ಯರಾಗಿರುತ್ತಾರೋ, ಅವರು ಸಾರ್ವ ಜನಿಕರ ದುಡ್ಡನ್ನು ತಿಂದಿರಲಿ ಅಥವಾ ಯಾವ ರೀತಿ ಯಲ್ಲಾದರೂ ದುರುಪಯೋಗಮಾಡಿಕೊಂಡಿರಲಿ ಏನು ತಪ್ಪುಮಾಡಿದ್ದರೂ ಸಹ ಪುನಃ ಅವರೇ ಚುನಾ ವಣೆಯಾಗಿ ಬರುವ ನಿದರ್ಶನಗಳು ಹಲವಾರು ಇವೆ

ಇಂಥ ಸಮಯದಲ್ಲಿ ರಿಜಿಸ್ಟ್ರಾರ್‌ರವರು ಯಾವ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೂ ತುಂಬ ಕಷ್ಟವಿದೆ. ಈ ಬಗ್ಗೆ ಪೂರ್ಣ ಅನುಭವ ಪಡೆದು ಯಾವ ರೀತಿಯ ಎಚ್ಚರಿಕೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಆಲೋಚಿಸಿ ಈ ತಿದ್ದುಪಡಿಗಳನ್ನು ತಂದಿರುತ್ತಾರೆಂದು ನಾನು ಭಾವಿಸುತ್ತೇನೆ. ಈ ಮೂಲಕ ರಿಜಿಸ್ಟ್ರಾರ್‌ರವರಿಗೆ ವಿಶೇಷಾಧಿಕಾರವನ್ನು ಕಲ್ಪಿಸಿಕೊಡುವುದರಿಂದ ಅವರು ನೇರವಾಗಿ ತಮ್ಮ ಅಧಿಕಾರವನ್ನು ಚಲಾಯಿಸಿ ಸಹಕಾರ ಸಂಘದ ಮ್ಯಾನೇಜಿಂಗ್ ಕಮಿಟಿಯನ್ನು ಬದಲಾಯಿಸಿ ಬೇರೆಯವರನ್ನು ನೇಮಕಮಾಡುವುದಕ್ಕೆ ಒಂದು ಅವಕಾಶವನ್ನು ಕ್ಷಿಪ್ರದಲ್ಲಿಯೇ ಕಲ್ಪಿಸಿದ ಹಾಗಾಗುತ್ತದೆ.

ಆಮೇಲೆ surcharge ವಿಚಾರವಾಗಿ ಬಹಳ ಆಕ್ಷೇಪಣೆಗಳು ಬಂದಿವೆ. ಆಡಿಟ್ ಮಾಡುವ ಆಫೀಸರು ವರದಿ ಒಪ್ಪಿಸಿದಮೇಲೆ ಸೊಸೈಟಿಗೆ ಸಂಬಂಧಪಟ್ಟ ಯಾವ ಅಧಿಕಾರಿಯ ಮೇಲಾಗಲಿ ರಿಜಿಸ್ಟ್ರಾರ್‌ರವರು ಕೂಡಲೇ ಕಾರ್ಯಕ್ರಮ ಕೈಗೊಳ್ಳಲು ಮತ್ತು ಯಾವುದಾದರೂ ಅಪೀಲು ಸರ್ಕಾರಕ್ಕೆ ಬಂದರೂ ರಿಜಿಸ್ಟ್ರಾರ್‌ರವರ ಆರ್ಡರ್ ಮೇಲೆಯೇ ಅದನ್ನು hear ಮಾಡಬಹುದೆಂದು ಕೆಲವು ಬದಲಾವಣೆಗಳನ್ನು original Actನ 49ನೆಯ ಸೆಕ್ಷನ್ನಿಗೆ ಮಾಡಿರುತ್ತಾರೆ. ಹಿಂದೆ ಡಿಸ್ಟ್ರಿಕ್ಟ್ ಕೋರ್ಟಿಗೆ ಅಧಿಕಾರವಿತ್ತು. ಈ ಅಧಿಕಾರವನ್ನು ತೆಗೆದುಹಾಕಿ ಈಗ ನೇರವಾಗಿ ಸರ್ಕಾರದವರೇ ಇದನ್ನು ವಹಿಸಿರುತ್ತಾರೆ. ಆದಕಾರಣ ಇದನ್ನು retrograde step ಎಂದು ಕೆಲವರು ಹೇಳುತ್ತಾರೆ. ಸ್ವಾಮಿ, ಇದು ಸ್ಥಿರವಲ್ಲವೆಂದು ಹೇಳುವುದಕ್ಕೂ ಸಾಧ್ಯವಿಲ್ಲ. ಒಂದು ದೃಷ್ಟಿಯಲ್ಲಿ ಇದು retrograde step ಎಂದೇ ಭಾವಿಸಬೇಕಾಗುತ್ತದೆ. ಆದರೆ ಈ ರೀತಿ ತಿದ್ದುಪಡಿ ಬಂದಿರುವುದೂ ಅನುಭವದಿಂದ ಕಂಡುಬಂದಿರುವ ಕಷ್ಟ ಪರಂಪರೆಗಳನ್ನು ನಿರಪಡಿಸುವುದಕ್ಕಾಗಿಯೇ ಎಂದು ನಾನು ಭಾವಿಸುತ್ತೇನೆ. ಒಂದು ವೇಳೆ ಇಪ್ಪತ್ತು ತೀವ್ರ ಬದಲಾವಣೆ ಕೂಡದು, ಕೋರ್ಟಿಗೆ ಸಹ ಅನೇಕ ವೇಳೆಗಳಲ್ಲಿ ಈ ಬಗ್ಗೆ ನ್ಯಾಯ ತೀರ್ಮಾನ ದೊರಕಿಸಿ ಕೊಡುವುದಕ್ಕೆ ಅವಕಾಶ ಇರಬೇಕು ಎಂಬುದಾಗಿ ಅಭಿಪ್ರಾಯಪಡುವುದಾದರೆ ಸೆಲೆಕ್ಟ್ ಕಮಿಟಿಯಲ್ಲಿ ಈ ವಿಚಾರವನ್ನು ಕೂಲಂಕಷವಾಗಿ ಪರಿಶೀಲಿಸಿ ಸೂಕ್ತರೀತಿಯ ಬದಲಾವಣೆ ಮಾಡಬಹುದು.

ಒಟ್ಟಿನಲ್ಲಿ ಈ ತಿದ್ದುಪಡಿ ಮಸೂದೆಯನ್ನು ತಂದಿರತಕ್ಕ ಉದ್ದೇಶ ಸಾಧುವಾಗಿದೆ, ಕೋ ಆಪರೇಟಿವ್ ಸಂಸ್ಥೆಗಳು ನಮ್ಮ ದೇಶದಲ್ಲಿ ಬೆಳೆಯುವುದಕ್ಕೆ ಸಹಾಯಕವಾಗಿದೆ ಎಂದು ತೋರುತ್ತದೆ. ಬರೀ ತತ್ವಗಳಮೇಲೆ ಮಾತನಾಡುವುದಾದರೆ ಇದು ಸರಿಯಲ್ಲ, ಅದು ಸರಿಯಲ್ಲ, ಅಥವಾ democratic principles ಗೆ ವಿರುದ್ಧವಾಗಿದೆ ಎಂದು ಹೇಳಬಹುದು. ಆದರೆ ಇದರ ಜೊತೆಗೆ ಅನುಭವದ ಅಂತವನ್ನೂ ಗಣನೆಗೆ ತೆಗೆದುಕೊಂಡರೆ ಇಂಥ ಕೆಲವು ಮುಖ್ಯ ಬದಲಾವಣೆಗಳು ತೀರ ಅಗತ್ಯವೆಂಬುದು ನಮ್ಮ ಮನದಟ್ಟಾಗುತ್ತದೆ. ಈ ಬದಲಾವಣೆಗಳಾಗದಿದ್ದರೆ ಸಹಕಾರ ಸಂಸ್ಥೆಗಳ ಬೆಳೆವಣಿಗೆಯಾಗುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಇದನ್ನು ನಾವೆಲ್ಲರೂ ಹೃತ್ಪೂರ್ವಕವಾಗಿ ಸ್ವಾಗತಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ–ಹೊಸನಗರ).—ಸ್ವಾಮಿ, ಮೈಸೂರು ಸಂಸ್ಥಾನದಲ್ಲಿ ಸಹಕಾರ ಸಂಘಗಳ ಕಾರ್ಯವ್ಯವಸ್ಥೆಯನ್ನು ಹೆಚ್ಚು ಅಭಿವೃದ್ಧಿಗೊಳಿಸುವ ಮತ್ತು ಭದ್ರಗೊಳಿಸುವ ದೃಷ್ಟಿಯಿಂದ ಸರ್ಕಾರದವರು 1948ನೆಯ ಇಸವಿಯ ಅಕ್ಟೋಬರ್ ಒಂದು ತಿದ್ದುಪಡಿಯ ಮುಖ್ಯ ಉದ್ದೇಶ ಸೂಚಿಸುತ್ತಾ ಅವರು ತಿಳಿಸಿರುವ ಅಂಶವೇನೆಂದರೆ: ರಿಜರ್ವ್‌ಬ್ಯಾಂಕಿನವರು ವ್ಯವಸಾಯಗಾರರಿಗೆ ಸಾಲಗಳನ್ನು ಕೊಡುವುದಕ್ಕೆ ಮುಂದೆಬಂದಿರುತ್ತಾರೆ, ಆ ಸಾಲವನ್ನು ವಸೂಲು ಮಾಡಬೇಕಾದರೆ ಈಗಿರತಕ್ಕ ಕಾನೂನಿನಲ್ಲಿರತಕ್ಕ ಅಧಿಕಾರಕ್ಕಿಂತ ಹೆಚ್ಚಿನ ಅಧಿಕಾರ ಸರ್ಕಾರಕ್ಕೆ ಬೇಕಾಗಿರುವುದರಿಂದ ಈ ತಿದ್ದುಪಡಿ ಅವಶ್ಯಕವೆಂದು ಪುನಾಪಿಸಿರುತ್ತಾರೆ. ಈ ವಿಷಯದಲ್ಲಿ ಮಾತನಾಡಿದ ಶ್ರೀ ಕೆ. ಪಟ್ಟಾಭಿರಾಮರವರು, ಸಹಕಾರ ಸಂಘಗಳ ಕಾನೂನು ತಿದ್ದುಪಡಿಮಾಡುವ ಸಂದರ್ಭದಲ್ಲಿ ಸರ್ಕಾರದ ಮುಖ್ಯ ಉದ್ದೇಶ ಈ ರೀತಿ ಇರಬಾರದಾಗಿತ್ತು ಎಂದು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಈಗ ಇದರ ವಿಚಾರದಲ್ಲಿ ಚರ್ಚೆಯಾಗಿರುವುದನ್ನು ನಾವೆಲ್ಲ ಕೇಳಿದ್ದೇವೆ. ಶ್ರೀ ಎ. ಭೀಮಪ್ಪನಾಯಕರು, ಶ್ರೀ ಎಚ್. ಎಂ. ಚನ್ನಬಸಪ್ಪನವರು ಮತ್ತು ಇತರ ಕೆಲವು ಮಾನ್ಯ ಸದಸ್ಯರು ಈ ತಿದ್ದುಪಡಿ ಅತ್ಯಗತ್ಯ, ಈಗಿರತಕ್ಕ ಕಾನೂನಿನಲ್ಲಿ ಸಾಕಷ್ಟು ಬಲವಿಲ್ಲದೇ ಇರುವುದರಿಂದ ಸಹಕಾರ ಸಂಘಗಳು ನಶಿಸಿಹೋಗುವುದಕ್ಕೂ ಅವುಗಳಲ್ಲಿ ಹಣದ ದುರುಪಯೋಗವಾಗುವುದಕ್ಕೂ ಕಾರಣವಾಗಿದೆ, ಆದುದರಿಂದ ಹಣದ ದುರುಪಯೋಗಮಾಡಿದವರಿಗೆ ಹೆಚ್ಚಿನ ಶಿಕ್ಷೆಮಾಡುವುದಕ್ಕೆ ಅಧಿಕಾರಗಳು ಇರಲೇಬೇಕೆಂದು ಅಭಿಪ್ರಾಯಪಟ್ಟಿರುತ್ತಾರೆ.

ಇದಕ್ಕೆ ವಿರೋಧವಾಗಿ ಶ್ರೀ ಶ್ರೀನಿವಾಸ ಅಯಂಗಾರ್‌ರವರು ಮೊದಲು ಮಾತನಾಡಿದವರು. ಹಾಗೆಯೇ ಶ್ರೀ ಇಮಾಂ ಸಾಹೇಬರವರು, ಶ್ರೀ ಲಿಂಗಣ್ಣನವರು ಮತ್ತೆ ಕೆಲವರು ಈ ತಿದ್ದುಪಡಿತಂದಿರತಕ್ಕಂಥಾದ್ದು ಅಷ್ಟೇನೂ ಸೂಕ್ತವಲ್ಲ, ಮತ್ತು ಈಗ ಸಂಸ್ಥಾನದಲ್ಲಿ ಸಹಕಾರ ಸಂಘಗಳು ಯಾವ ರೀತಿ ಕೆಲಸಮಾಡುತ್ತಾ ಇವೆ ಎಂಬುದನ್ನು ನಾವು ಪುನಃ ಪರಿಶೀಲನೆ ಮಾಡತಕ್ಕ ಸಮಯ ಬಂದಿದೆ, ಮತ್ತು ಕೆಲವು ತಿದ್ದುಪಡಿಗಳು ಸಹಕಾರ ಸಂಘದ ತತ್ವಗಳನ್ನೇ ನಿರ್ಮೂಲವಾಗಿ ನಾಶಮಾಡತಕ್ಕ ತಿದ್ದುಪಡಿಗಳಾಗಿವೆ, ಕೋರ್ಟಿನ ಅಧಿಕಾರವನ್ನು ರಿಜಿಸ್ಟ್ರಾರ್ ಎಂಬ ವ್ಯಕ್ತಿಯ ಕೈಯಲ್ಲಿ ನೀವು ಕೊಡುವುದಕ್ಕೆ ಹೋಗಿದ್ದೀರಿ ಎಂದು ಹೇಳಿ ಕಟುವಾಗಿ ಟೀಕೆಗಳನ್ನು ಮಾಡಿದ್ದಾರೆ. ಆ ಟೀಕೆಗಳಿಗೆ ಸಮಂಜಸವಾದ ಉತ್ತರವನ್ನು ಈ ತಿದ್ದುಪಡಿಗೆ ಬೆಂಬಲ ಕೊಟ್ಟಂಥ ಮಾಹನೀಯರು ಕೊಟ್ಟಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಈ ಸಹಕಾರ ಸಂಘಗಳು 50 ವರ್ಷಗಳಿಂದ ಬೆಳೆದುಬರುತ್ತಾ ಇದೆ ಎಂದು ಶ್ರೀ ಚನ್ನಬಸಪ್ಪನವರು ಅಪ್ಪಣೆ ಕೊಡಿಸಿದರು. ಶ್ರೀ ಶ್ರೀನಿವಾಸ ಅಯಂಗಾರ್‌ರವರು ಈ ಸಹಕಾರ ಬಹಳ ಪುರಾತನವಾದ ಪದ್ಧತಿ, ಇದು ಹಿಂದಿನಿಂದಲೂ ನಮ್ಮ ದೇಶದಲ್ಲಿ ನಡೆದುಕೊಂಡು ಬಂದಿದೆ ಎಂದು ಹೇಳಿದರು. ಮನುಷ್ಯ ಅನಹಕಾರದಿಂದ ಬದುಕುವುದು ದುರ್ಲಭ, ಕಷ್ಟ ಎಂದು ಹೇಳಿ ಯಾವೊತ್ತು ತಿಳಿದುಕೊಂಡನೋ ಅವೊತ್ತಿನಿಂದಲೂ ಸಹ ಸಹಕಾರಕ್ಕಾಗಿ ಹಾತೊರೆಯುತ್ತಾ ಇದ್ದಾನೆ. ಸಹಕಾರವನ್ನು ಜೀವನದಲ್ಲಿ ಮಾಡಿಸಿಕೊಂಡು ಬರುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾನೆ. ಎಂಬುದನ್ನು ನಾವು ಕಂಡುಕೊಳ್ಳಬಹುದಾಗಿದೆ. ಉಪನಿಷತ್ತಿನಲ್ಲಿ ಹೇಳಿರತಕ್ಕ ಮಾತನ್ನು ಶ್ರೀ ಶ್ರೀನಿವಾಸ ಅಯಂಗಾರ್‌ರವರು ಉದಾಹರಿಸಿದರು.

"ಸಹನಾವವತು,
ಸಹನೌಭುನಕ್ತು, ಸಹವೀರ್ಯಂ
ಕರವಾವಹೈ. . . . ."॥

(ಶ್ರೀ ಎಸ್. ಗೋಪಾಲಗೌಡ.)

ಇತ್ಯಾದಿ... ನನ್ನ ಅನುಭವದಲ್ಲಿ ಈ ಪಾಠ ಅಥವಾ ಈ ಮಂತ್ರವನ್ನು ಎಲ್ಲಿ ಜಪಿಸುತ್ತಾನೆ ಎಂಬುದನ್ನು ನೋಡಿದರೆ, ಕೆಲವು ಮೇಳೆ ಸಮಾರಂಭದ ಊಟಕ್ಕೆ ಕುಳಿತಾಗ ಮಾತ್ರ ಇದನ್ನು ಹೇಳಿ ಊಟ ಪ್ರಾರಂಭ ಮಾಡುವುದನ್ನು ನೋಡಿದ್ದೇನೆ. (ನಗು!) ಇತರ ಕಾರ್ಯಗಳಲ್ಲಿ ಮತ್ತೆ, ಜೀವನದಲ್ಲಿ ಅಷ್ಟಾಗಿ ಈ ಮಂತ್ರದಂತೆ ಕಾರ್ಯತಃ ನಡೆಯುತ್ತಾ ಇರುವುದನ್ನು ನಾವು ಇವೊತ್ತು ನೋಡುವುದಕ್ಕೆ ಸಾಧ್ಯವಿಲ್ಲ; ಮತ್ತು ಈ 'ಸಹಕಾರ' ಎಂಬ ಶಬ್ದದ ಬಗ್ಗೆ ನಾವು ಯೋಚನೆ ಮಾಡುತ್ತಿಲ್ಲ. ಈ 'ಸಹಕಾರ' ಎಂಬ ಶಬ್ದ ಇವೊತ್ತು 'ಸಾಹುಕಾರ' ಎನ್ನುವ ಶಬ್ದ ಆಗಿ ಮಾರ್ಪಾಟಾಗಿದೆ ಎಂಬುದಕ್ಕೆ ಸಾಕಾದಷ್ಟು ಆಧಾರಗಳು ಇವೆ. ಹಿಂದೆ ಕೂಡ ಸಹಕಾರ ಪದ್ಧತಿ ಇತ್ತು. ನಮಗೆ ಕಂಡ ಹಾಗೆ ಹಿಂದೆ ನಮ್ಮ ದೇಶದಲ್ಲಿ ಹೊಕಾಸಿನ ಚಲಾವಣೆ ತೀರ ಕಡಿಮೆ ಇತ್ತು ಎಂದು ಗೊತ್ತಾಗುತ್ತದೆ. ಮತ್ತು ಬ್ಯಸ್ವಿಪ್ ಇತ್ತು ಎಂಬುದನ್ನು ಕೂಡ ನೋಡಿದ್ದೇವೆ. ಅದಕ್ಕೆ ನಿದರ್ಶನವಾಗಿ ಈಗಲೂ ಕೂಡ ಕೆಲವು ಮಠಗಳು ಇತ್ಯಾದಿ, ಇತ್ಯಾದಿ ಸಂಸ್ಥೆಗಳನ್ನು ನಾವು ನೋಡುತ್ತೇವೆ. ಒಂದು ಕಡೆ ಒಂದು ಸಂಸ್ಥೆ ಹಣವನ್ನು ಶೇಖರಿಸಿ ಇರತಕ್ಕದ್ದು, ಅದನ್ನು ಸಮಾಜದ ಎಲ್ಲರ ಉಪಯೋಗಕ್ಕೆ, ಎಲ್ಲರ ಅಭಿವೃದ್ಧಿಗಾಗಿ ಕೆಲವರು ಖರ್ಚು ಮಾಡತಕ್ಕದ್ದು ಈ ಸಹಕಾರ ತತ್ವದ ಮೂಲವಾಗಿ ಬಂದಿದೆ. ಅನಂತರದಲ್ಲಿ ಕ್ರಮವಾಗಿ ಇದು ಸಡಿಲವಾಗುತ್ತ ಬಂದು ಮೊದಲಿನ ಆರ್ಥಿಕ ವ್ಯವಸ್ಥೆ ಏನಿತ್ತೋ ಅದು ಬದಲಾಗಿ ಪಾಲುಗಾರಿಕೆ ಬೆಳೆದು ಬಂದು 'ಸಹಕಾರ' ಎನ್ನುವುದು 'ಸಾಹುಕಾರ' ಎನ್ನುವ ಸ್ಥಾನವನ್ನು ಪಡೆಯುತ್ತದೆ. ಈ ಸಾಹುಕಾರರ ಕೈಯಿಂದ ಸಾಲಗಾರರನ್ನು ತಪ್ಪಿಸಬೇಕು, ಆರ್ಥಿಕ ಜೀವನದಲ್ಲಿ ಪರರನ್ನು ಆಶ್ರಯಿಸುವುದನ್ನು ಸಾಧ್ಯವಾದಮಟ್ಟಿಗೂ ಬಿಟ್ಟುಕೊಟ್ಟು ತಮ್ಮ ಜೀವನಕ್ಕೆ ಅಗತ್ಯವಾಗಿ ಬೇಕಾಗತಕ್ಕ ಅವಶ್ಯಕತೆಗಳನ್ನು ಸಹಕಾರ ಪದ್ಧತಿಯ ಮೇಲೆ ಬಡವರು ಅಥವಾ ಒಂದು ಗುಂಪಿಗೆ ಸೇರಿದವರು ಅಥವಾ ಒಂದೇ ಉದ್ಯೋಗವನ್ನು ಮಾಡತಕ್ಕವರು ಅಥವಾ ಒಂದೇ ಗ್ರಾಮದಲ್ಲಿ, ಒಂದೇ ಲೊಕ್ಯಾಲಿಟಿಯಲ್ಲಿ ಇರತಕ್ಕವರು ಸೇರಿ ತಮ್ಮ ಯಥಾನುಶಕ್ತಿ ಹಣವನ್ನು ಕೂಡಿಟ್ಟು ಪ್ರತಿಯೊಬ್ಬರ ಉಪಯೋಗಕ್ಕೆ ಬಳಸಿಕೊಳ್ಳತಕ್ಕ ಒಂದು ಪದ್ಧತಿಯನ್ನು ಜಾರಿಗೆತರಬೇಕೆಂದು ಹೇಳಿ, ಅನಂತರದಲ್ಲಿ ಮನಸ್ಸು ಮಾಡಿ ಕೆಲಸಮಾಡತಕ್ಕ ಈ ಒಂದು ಪದ್ಧತಿ ತಾನಾಗಿಯೇ ಬೆಳೆದುಕೊಂಡು ಬಂದಿದೆ. ಅಲ್ಲದೆ ಈ ಪದ್ಧತಿಯು ಸರ್ಕಾರದ ಕೃಪಾಶ್ರಯದಲ್ಲೂ ಬೆಳೆದುಕೊಂಡು ಬಂದಿದೆ, ಆದ್ದರಿಂದ ಇವೊತ್ತು ಸರ್ಕಾರದವರು ಇದರಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿ ಷೇರುಗಳನ್ನು ಕೊಂಡುಕೊಂಡು, ಹಣ ಸಹಾಯವನ್ನು ಕೊಟ್ಟು ಇದರ ಪುನರ್ ವ್ಯವಸ್ಥೆ ಮಾಡತಕ್ಕ ಕಾರ್ಯವನ್ನು ಕೈಕೊಳ್ಳುವುದಕ್ಕೆ ನಮ್ಮ ಅಭ್ಯಂತರ ಏನು ಎಂದು ಹೇಳಿ ಮತ್ತೊಬ್ಬ ಸದಸ್ಯರು ಪ್ರಶ್ನೆಮಾಡಿದರು. ಇದುವರೆಗೂ ಸಂಸ್ಥಾನದಲ್ಲಿ ಸಹಕಾರ ಸಂಘಗಳು ಸರ್ಕಾರದ ಕೃಪಾಪೋಷಿತವಾಗಿ ಬೆಳೆದುಕೊಂಡು ಬಂದಿವೆ. ಇವೊತ್ತಿನದಿವಸ ಹೆಚ್ಚಿನ ಸಹಾಯ ಕೊಡುತ್ತೇವೆ, ಹೆಚ್ಚಿನ ಜವಾಬ್ದಾರಿಯನ್ನು ನಾವು ಹೊತ್ತುಕೊಳ್ಳುತ್ತೇವೆ ಮತ್ತು ಹೆಚ್ಚು ವ್ಯವಸ್ಥಿತವಾಗಿ ನಡೆಸಿಕೊಂಡು ಬರುವುದಕ್ಕೆ ಏರ್ಪಾಡು ಮಾಡುತ್ತೇವೆ ಎಂದು ಹೇಳಿದರೆ ನಾವೇಕೆ ಅಂಥ ಒಂದು ಅಭಿಪ್ರಾಯವನ್ನು ಅಥವಾ ಅಂಥ ಒಂದು ಮುನ್ನಡೆಯನ್ನು ಪ್ರತಿಭಟಿಸಿ, ಅದು ಸಹಕಾರ ತತ್ವವನ್ನೇ ನಿರ್ಮೂಲ ಮಾಡುತ್ತದೆ ಎಂದು ಟೀಕೆಮಾಡಬೇಕು ಎಂದು ಹೇಳಿ ಕೆಲವು ಸದಸ್ಯರು ಅಭಿಪ್ರಾಯಪಟ್ಟಿದ್ದಾರೆ. ಈ ಅಭಿಪ್ರಾಯಗಳನ್ನು ಎಂದರೆ ಪರ ಮತ್ತು ವಿರೋಧ ಅಭಿಪ್ರಾಯಗಳನ್ನು ಕೇಳಿದನಂತರದಲ್ಲಾ ನನಗಾದರೋ ಇನ್ನು ಕೆಲವು ಅಂಶಗಳು ಸ್ಪಷ್ಟವಾಗಿಲ್ಲ. ನಾನು...

Dr. R. NAGAN GOWDA (Minister for Agriculture).—Just one word, Sir. This Bill is proposed to be sent to the Select Committee. We will have occasions to discuss various items and also the principles of co-operation of which the Hon'ble Member is speaking so eloquently today. I would therefore suggest that these speeches could be done after the Bill comes back from the Select Committee because we have not enough time today. I think it would be better that we shorten the debate.

Mr. SPEAKER.—The Hon'ble Minister has not followed the procedure that is obtaining here. It is open to him to move for closure. I cannot shut out any Hon'ble Member from making his observations. The Rules are very clear. Any member may move for closure and that formal motion will be put to the vote of the House and if the motion is carried, the debate will be closed.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಮಂತ್ರಿಗಳ ವಿನಂತಿ ಏನೋ ಸಾಧುವಾದದ್ದೇ ಆದರೂ, ಸೆಲೆಕ್ಟ್ ಕಮಿಟಿಗೆ ಹೋದರೂ ಅಲ್ಲಿ ಯಾವ ರೀತಿ ತಿದ್ದುಪಡಿ ಆಗಬೇಕು, ಬದಲಾವಣೆ ಆಗಬೇಕು ಎಂಬುದು ಕೂಡ ಸಭೆಯ ಅಭಿಪ್ರಾಯದ ಮೇಲೆ ಆಗಬೇಕಾಗಿರುವುದರಿಂದ ತಾವು ಇಲ್ಲಿ ಚರ್ಚೆ ಆಗುವುದನ್ನು ತಡೆಹಿಡಿಯುವುದು ಅಷ್ಟು ಸೂಕ್ತವಾಗಲಾರದು ಎಂದು ಹೇಳುತ್ತೇನೆ.

Mr. SPEAKER.—May I bring it to the notice of the Hon'ble Members, that anybody who is anxious to close the debate on the Bill may move a closure motion. In order to expedite the discussion on the Bill, the Hon'ble Minister suggested that the Bill is going before the Select Committee and will come again before the House for discussion. At that stage, the Bill can be discussed in detail clause after clause. That is what is suggested by the Hon'ble Minister in charge of the Bill. It is left to the House.

Sri A. BHEEMAPPA NAIK.—With due deference to the ruling of the Chair . . .

Mr. SPEAKER.—I have not given any ruling.

Sri A. BHEEMAPPA NAIK.—I mean the suggestion of the Chair—I would submit that once we send it to the Select Committee, we will have accepted the general principles. Supposing I object to the general principles? His argument leads to that. If this sort of a precedent is set up here, later on in respect of any other Bill with the general principles of which we may not agree and accept, what will be the position? Therefore, Sir, we must give free scope to those who object to the very introduction or the very general principles. It would not be a good precedent if we curtail discussion on the ground that there is no sufficient time.

Sri B. HUTCHE GOWDA (Turuvekere).—There are more Members who wish to participate in the debate on the Bill, Sir. I suggest that this may be taken up at the next adjourned session for discussion.

Mr. SPEAKER.—I am mainly guided by the Rules of Procedure and also by the wishes of the Hon'ble Members of this House. We shall follow the rules of procedure. I will obtain the sense of the House if a closure motion is formally moved. If there are any fresh points to be urged, I have no objection to give as much time as is needed. But generally what happens is that arguments are repeated. Therefore in the interest of good debate, I would request Hon'ble Members not to repeat arguments but throw some fresh light on the provisions of the Bill. This will eliminate delay also.

ಶ್ರೀ ಎಸ್. ಗೋಪಾಲಗೌಡ.—ಇದುವರೆಗೂ ನಡೆದಿರತಕ್ಕಂಥ ಚರ್ಚೆಯ ಮೇಲೆ, ಕೆಲವು ಅಂಶಗಳಲ್ಲಿ, ನನ್ನ ಅಭಿಪ್ರಾಯವನ್ನು ಸೂಚಿಸಬೇಕಾಗುತ್ತದೆ. ಆದ್ದರಿಂದ ಆ ವಿಷಯಗಳು ಚರ್ಚೆಗೆ ಕಾರಣವಾಗುತ್ತವೆ; ಅವುಗಳ ಮೇಲೆ ನನ್ನ ಅಭಿಪ್ರಾಯ ಏನು ಎಂಬುದನ್ನು ಹೇಳುವಾಗ ಪುನರಪಿ ಹೇಳಬೇಕಾಗುತ್ತದೆ. ಈಗ ಮೊಟ್ಟಮೊದಲನೆಯದಾಗಿ ಇದರಲ್ಲಿ ಒಂದು ತಿದ್ದುಪಡಿಯನ್ನು ಸರ್ಕಾರದವರು ಸೂಚಿಸಿದ್ದಾರೆ. ಏನೆಂದರೆ ಯಾರೊಬ್ಬರು ಸದಸ್ಯರೇ ಆಗಲಿ 1,000 ರೂಪಾಯಿಗಳಿಗಿಂತ ಹೆಚ್ಚು ಷೇರುಗಳನ್ನು ಪಡೆದಿರಬಾರದು ಎಂದು ಹೇಳಿ ಒರಿಜಿನಲ್ ಆಕ್ಟ್‌ನಲ್ಲಿ ಇದೆ. ಆ 1,000 ರೂಪಾಯಿ ಅನ್ನುವುದಕ್ಕೆ ಬದಲಾಗಿ 10 ಸಾವಿರ ರೂಪಾಯಿ ಇರಲಿ ಎಂದು ಹೇಳಿದೆ. ಈ ತಿದ್ದುಪಡಿ ಸಹಕಾರತತ್ವಕ್ಕೆ ಎಷ್ಟರಮಟ್ಟಿಗೆ ಸಹಕಾರಿಯಾಗುತ್ತದೆ, ಇದರಿಂದ ಹೆಚ್ಚು ಅನುಕೂಲವಾಗುತ್ತದೆಯೇ ಅಥವಾ ಈ ಸಹಕಾರ ಸಂಘಗಳ ಕೆಲಸ ಕಾರ್ಯದಲ್ಲಿ ತೊಂದರೆ ಆದೀತೇ ಎಂಬುದನ್ನು ನಾವು ಪರಿಶೀಲನೆ ಮಾಡಬೇಕು. ಈ ತಿದ್ದುಪಡಿಯ ಪರವಾಗಿ ಹೇಳಿರತಕ್ಕವರು ಹೆಚ್ಚು ಷೇರುಗಳನ್ನು ಕೊಂಡುಕೊಳ್ಳುವುದರಿಂದ ಅಭಿವೃದ್ಧಿಪಡಿಸುವುದಕ್ಕೆ, ವ್ಯವಹಾರ ರೂಢಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿ ಅಭಿಪ್ರಾಯಪಟ್ಟಿದ್ದಾರೆ. ವಿರೋಧ ಮಾಡಿದವರು 10 ಸಾವಿರ ರೂಪಾಯಿಗಳವರೆಗೂ ಷೇರುಗಳನ್ನು ಒಬ್ಬರೇ ತೆಗೆದುಕೊಳ್ಳುವುದಕ್ಕೆ ಅವಕಾಶವಿವ್ವರೆ ಅದರಿಂದ 'ಸಹಕಾರ ತತ್ವ' ಏನಿದೆ, ಹೆಚ್ಚು ಜನರು ಸಹಕರಿಸಿ ಇದರ ಒಂದು ಸೌಲಭ್ಯ ಪಡೆಯಬೇಕೆಂಬ ತತ್ವ ಆ ತತ್ವಕ್ಕೇ ಮೂಲಭೂತವಾಗಿ ಕೊಡಲಿ ಏಟು ಬಿದ್ದಂತೆ ಆಗುತ್ತದೆ ಎಂದು ಹೇಳಿದರು. ಇದು ಪರಿಶೀಲನೆಯಾಗಬೇಕಾದ ಅಂಶ. ಇಲ್ಲಿ ಸರ್ಕಾರದವರಿಗೆ ಷೇರುಗಳನ್ನು ಕೊಂಡುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ.

11-30 A.M.

ಸರ್ಕಾರದವರು ಕೋ-ಆಪರೇಟಿವ್ ಸೊಸೈಟಿಗಳಿಂದ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಏಕೆ ಸಾಧ್ಯವಾಗುವುದಿಲ್ಲ? ಅವರೇನೋ ಸಾಲ ಕೇಳುವುದಿಲ್ಲ. ಇದು ಯಾವ ರೀತಿ ಸಹಕಾರೀ ತತ್ವದಲ್ಲಿ ಹೊಂದಿಕೊಳ್ಳುತ್ತದೆ ಎಂಬುದು ಮೂಲಭೂತವಾದ ಪ್ರಶ್ನೆ. ರೈತರಿಗೆ ಸಾಲ ಸಿಕ್ಕುವುದಾದರೆ ಸರ್ಕಾರ ಹತ್ತು ಸಾವಿರ ರೂಪಾಯಿಗಳವರೆಗೆ ಷೇರುಗಳನ್ನು ಕೊಂಡುಕೊಳ್ಳಬೇಕು. ಇದು ಜಾಯಿಂಟ್ ಸ್ಟಾಕ್ ಕಂಪೆನಿಯೆ?

Sri H. SIDDAVEERAPPA (Minister for Home and Industries).—There are two advantages. If the Government have shares, there will be some sort of guarantee or confidence in the mind of the public; secondly, nowadays, we want to have many big schemes under the co-operation scheme; for instance a sugar mill. If Government have shares in such industries, it would be an impetus to the shareholders; it would not be a Joint-Stock Company.

ಶ್ರೀ ಎಸ್. ಗೋಪಾಲಗೌಡ.—ಉದ್ದೇಶ ಬಹುಶಃ ಘನವಾದದ್ದು. ಆದರೆ ಈಗಾಗಲೆ ಸರ್ಕಾರ ಷೇರುಗಳನ್ನು ಹೊಂದಿರತಕ್ಕಂಥ ಜಾಯಿಂಟ್ ಸ್ಟಾಕ್ ಕಂಪೆನಿಗಳನ್ನು ನಾವು ನೋಡಿದರೆ ಹಲವಾರು ಸಂಸ್ಥೆಗಳಲ್ಲಿ ಸರ್ಕಾರದ ಹಣವಿದ್ದರೂ ಕೂಡ ಅವುಗಳ ಮೇಲ್ವಿಚಾರಣೆ ಅವುಗಳು ಕೆಲಸಮಾಡತಕ್ಕಂಥ ರೀತಿ ನೀತಿಗಳು ಸಮರ್ಪಕವಾಗಿಲ್ಲ ಎಂಬುದಕ್ಕೆ ಉದಾಹರಣೆಗಳು ಬೇಕಾದಷ್ಟಿವೆ. ಆದ್ದರಿಂದ ಸರ್ಕಾರದ ಹಣ ಒದಗಿಸಲ್ಪಟ್ಟಮಾತ್ರಕ್ಕೇ ಈ ಸಹಕಾರ ಸಂಘಗಳು ಪುನಃ ಚೇತರಿಸಿಕೊಂಡು ಹೆಚ್ಚಿನ ಜವಾಬ್ದಾರಿಯಿಂದ ವರ್ತಿಸಿ ಹೆಚ್ಚು ಜನರಿಗೆ ಅನುಕೂಲವಾಗುವ ರೀತಿಯಲ್ಲಿ ವರ್ತಿಸುತ್ತವೆಂಬುದನ್ನು ನಾನು ಒಪ್ಪುವುದಿಲ್ಲ. ಈ ಪ್ರಶ್ನೆಯನ್ನು ವಿರೋಧ ಮಾಡುವವರು ಯಾವ ಕಾರಣಕ್ಕಾಗಿ ವಿರೋಧ ಮಾಡಿದ್ದಾರೆಂದರೆ ಒಂಚೆಗೆ ತಲೆ ಇಡುವುದಕ್ಕೆ ಅವಕಾಶ ಕೊಟ್ಟು ಮನೆ ಬಿಟ್ಟು ಹೊರಕ್ಕೆ ಹೋದ ಎಂದು ಹೇಳುವಹಾಗೆ ಏನಾದರೂ ಆದೀತೋ ಏನೋ ಎಂದು. ಸಹಕಾರ ಎಂಬುದಕ್ಕೆ ನಾನು ತಿಳಿದುಕೊಂಡಿರುವಹಾಗೆ ವಾಲಂಟರಿ ಎಂಬ ಅರ್ಥವಿರುತ್ತದೆ; ನಾನು ಸ್ವಯಂ ಪ್ರೇರಿತನಾಗಿ ಸಹಕರಿಸುತ್ತೇನೆ, ಸ್ವಯಂ ಪ್ರೇರಿತನಾಗಿ ಈ ಸಹಕಾರ ಸಂಘಗಳನ್ನು ಬೆಳೆಸಿಕೊಂಡು ಬರುವುದಕ್ಕೆ ನನ್ನ

(ಶ್ರೀ ಎಸ್. ಗೋಪಾಲಗೌಡ.)

ಕ್ಕೆರಾದ ಸಹಕಾರವನ್ನು ನಾನು ಮಾಡುತ್ತೇನೆ ಎಂಬುದು ಅರ್ಥ.

Sri D. DEVARAJ URS.—Sir, sometimes people are made to co-operate; my friend knows it too well.

Sri H. SIDDAVEERAPPA.—By persuation.

ಶ್ರೀ ಎಸ್. ಗೋಪಾಲಗೌಡ.—ಈಗ ಸರ್ಕಾರ ವೆಂಬ ದೊಡ್ಡಣ್ಣ ಸಹಾಯ ಮಾಡುತ್ತೇನೆಂದು ಬರುತ್ತಿರುವಾಗ ಕೋಲು, ಕರಟ ಕೊಡುವ ನಂದರ್ಭ ಬರುತ್ತದೆಯೋ ಏನೋ ಎಂಬ ಅನುಮಾನವಿದೆ. ಆದ್ದರಿಂದ ಈ ತಿದ್ದುಪಡಿಯನ್ನು ತಾತ್ಪಿಕದೃಷ್ಟಿಯಿಂದ ಸಮಂಜಸವೆ ಅಲ್ಲವೆ ಎಂದು ಈಗಿರತಕ್ಕ ರಿಜಿಸ್ಟ್ರಾರು ಮತ್ತು ಈ ಸಭೆಯ ಮುಂದೆ ಮುಂಡಿಸಿರುವ ಮಾನ್ಯ ಮಂತ್ರಿಗಳು ಹಾಗೂ ಇದಕ್ಕೆ ಬೆಂಬಲ ಕೊಡುವ ಮಾನ್ಯ ಸದಸ್ಯರು ದೂರದೃಷ್ಟಿಯಿಂದ ಪರಿಶೀಲಿಸ ಬೇಕು ಎಂಬುದು ನನ್ನ ಸವಿನಯ ವಿನಂತಿ.

Sri D. DEVARAJ URS.—We have ideals and realities before us; not only ideals, as you know.

Sri S. GOPALA GOWDA.—It is very kind of you, Sir. ಇನ್ನು ಎರಡನೆಯ ದಾಗಿ ಇದಕ್ಕೆ ಹಳ್ಳಿಯಲ್ಲ ವಾಸವಾಗಿರಬೇಕು, ಅದೇ ಕ್ಲಾಸ್ ಅಥವಾ ಆಕ್ಯುಪೇಷನ್ನಿಗೆ ಸೇರಿಸಬೇಕು ಎಂದು. ಸೆಕ್ಷನ್ ಎಂಟರ ಒಂದನೆಯ ಸಬ್ ಸೆಕ್ಷನ್ನಿಗೆ ತಿದ್ದುಪಡಿಯಿದೆ. ನಾನು ಈ ಬಗ್ಗೆ ವಿರೋಧಮಾಡಬೇಕಾದ್ದೇನೂ ಇಲ್ಲ. ಏಕೆಂದರೆ ಸಾಮಾನ್ಯವಾಗಿ ಈಗ ಕೂಲಿಗಾರರಿಗೇ ಬೇರೆ ಸಹಕಾರಸಂಘಗಳು, ರೈತರಿಗೇ ಬೇರೆ ಸಹಕಾರಸಂಘಗಳು, ವ್ಯಾಪಾರಿಗಾರರಿಗೇ ಬೇರೆ ಸಹಕಾರಸಂಘಗಳು—ಹೀಗೆ ಅವರವರ ಆಕ್ಯುಪೇಷನ್‌ಗಳಿಗೆ ಅವರವರ ತರಗತಿಗೆ ನಂಬಂಧಪಟ್ಟಹಾಗೆ ಸಹಕಾರಸಂಘಗಳು ಏರ್ಪಡುವ ಅವಶ್ಯಕತೆ ಕಂಡು ಬಂದಿರುವುದರಿಂದ ಹಾಗೆ ಮಾಡುವುದರಿಂದ ತಪ್ಪೇನೂ ಇಲ್ಲ. ಆದರೆ ಬೇರೆಯವರು ಇರಲೇಬಾರದು ಎಂಬ ತತ್ವವನ್ನು ಪ್ರತಿಪಾದನೆಮಾಡುವಾಗ ಪುನಃ ಸ್ವಲ್ಪ ಆಲೋಚನೆ ಬೇಕಾಗುತ್ತದೆ. ಲೊಕ್ಯಾಲಿಟಿ ಪ್ರಶ್ನೆ ಮತ್ತು ಆ ಕ್ಲಾಸ್‌ಗೆ ಸೇರಿದ್ದಾನೆಯೆ ಇಲ್ಲವೆ ಎಂಬುದನ್ನು ನಿರ್ಣಯಿಸುವುದು ರಿಜಿಸ್ಟ್ರಾರರಿಗೆ ಸೇರಿದೆಯೆಂದು ಹೇಳುತ್ತಾರೆ. ಅಕಸ್ಮಾತ್ ಎಕ್ಸೆಪ್ಷನ್ ಒಂದು ಹುಟ್ಟಿಕೊಳ್ಳಬಹುದು. ಅಂಥ ನಂದರ್ಭಗಳಲ್ಲಿ ಮತ್ತೆ ತೊಡಕುಂಟಾದೀತೋ ಏನೋ ಎಂಬ ನಂದೇಹವಿದೆ. ಒಬ್ಬ ವ್ಯಕ್ತಿಯು ಈ ನಂಘಕ್ಕೆ ನದಸ್ಯನಾಗಬೇಕೆಂದು ಅರ್ಜಿ ಹಾಕಿದಾಗ ಸೇರುವುದಕ್ಕೆ ಅರ್ಹನೆ ಅಥವಾ ಅಲ್ಲವೆ ಎಂಬುದು ಇತ್ಯರ್ಥವಾಗ ಬೇಕಾಗುತ್ತದೆ. ಆಗ ಸಹಕರಿಸುವುದಕ್ಕೆ ಬಂದವನನ್ನು ವಾಪಸು ಕಳುಹಿಸಬೇಕಾದ ನಂದರ್ಭ ಬರಬಹುದು, ಹಾಗೆ ಕಳುಹಿಸುವುದರಿಂದ ಸಹಕರಿಸಲು ಬಂದವನಿಗೆ ಪ್ರೋತ್ಸಾಹ ದೊರೆಯುವುದಿಲ್ಲ. ಆ ಊರಿನವನಲ್ಲ, ಆ ಉದ್ಯೋಗಕ್ಕೆ ಸೇರಿದವನಲ್ಲ, ಅವನ ಹಿತ ಬೇರೆ, ನಂಘದ ಉದ್ದೇಶ ಬೇರೆ, ಆದ್ದರಿಂದ ಮೆಂಬರಾಗುವುದಕ್ಕೆ ಅರ್ಹನಲ್ಲ ಎಂದು ತೀರ್ಮಾನಮಾಡಬಹುದು ಎಂದು ಹೇಳುವಾಗ, ಸಹಕಾರ ಮನೋಭಾವ ವಿರುವ ಒಬ್ಬ ಮನುಷ್ಯನನ್ನು ಬೇಡ ಎಂದು ಹೇಳುವ ನಂದರ್ಭ ಬರಬಹುದು. ಆ ದೃಷ್ಟಿಯಿಂದ ಈ ತಿದ್ದುಪಡಿಯನ್ನು ಕೂಡ ಸೆಲೆಕ್ಟ್ ಕಮಿಟಿಯವರು ಪರಿಶೀಲನೆ ಬೇಕಾಗುತ್ತದೆ.

ಇನ್ನು ನಾಲ್ಕನೆಯ ತಿದ್ದುಪಡಿ ಒಂದು ಪ್ರತಿಗೆ ಬದಲಾಗಿ ಗೊತ್ತಾದ ಪ್ರತಿಗಳು ಎಂದಿದೆ. ಇದರ ಲ್ಲೇನೋ ಯಾವತರಹದ ಅಭ್ಯಂತರವೂ ಇರುವುದಕ್ಕೆ ಸಾಧ್ಯವಿಲ್ಲ. ಒಂದು ಕಾಪಿ ಕೊಟ್ಟಮೇಲೆ ಮತ್ತೊಂದು ಪ್ರತಿ ಬೇಕಾದರೆ ಪಡೆಯಲು ಅವಕಾಶವಿರಲೆಂದು ಈ ತಿದ್ದುಪಡಿ ತಂದಿರುವುದರಿಂದ ಇದರಿಂದ ಹೆಚ್ಚಿನ ಬದಲಾವಣೆಯೇನೂ ಆಗುವುದಿಲ್ಲ.

ಇನ್ನು ಆಸ್ತಿಗಳ ಮೇಲೆ ಥಾರ್ಡ್ ಕ್ರಿಯೇಟ್ ಮಾಡ ಬೇಕೆಂಬ ವಿಷಯವೂ ಬಹಳ ಮುಖ್ಯವಾದುದೆಂದು ನಾನು ತಿಳಿದುಕೊಂಡಿದ್ದೇನೆ. ನಹಕಾರನಂಘದಲ್ಲಿ ಸಾಲ ಪಡೆಯಬೇಕಾದರೆ ಆಸ್ತಿಯ ವಿಚಾರದಲ್ಲಿ ಹೇಗೆ ಮಾಡಬೇಕೆಂಬುದು 22-A ಎಂಬ ಕ್ಲಾಜಿನಲ್ಲಿ ಹೇಳಿದೆ. ಅದನ್ನು ಇಲ್ಲಿ ಸೇರಿನುವುವಕ್ಕೆ ಪ್ರಯತ್ನ ನಡೆದಿದೆ. ಇದರಿಂದ ರೈತನಿಗೆ ಮತ್ತ ನಹಕಾರನಂಘಗಳಲ್ಲಿರುವ ಅರ್ಧಭಾಗದ ನದಸ್ಯರಿಗೆ ಯಾವ ರೀತಿಯಲ್ಲಿ ಅನುಕೂಲವಾಗುತ್ತದೆ ಅಥವಾ ಪ್ರತಿಕೂಲವಾಗುತ್ತದೆ ಎಂಬುದನ್ನು ಕೂಲಂಕಷವಾಗಿ ಪರಿಶೀಲನಬೇಕಾದದ್ದು ಬಹಳ ಅಗತ್ಯ. ಇದೇ ನಂದರ್ಭದಲ್ಲಿ ಭೂಮಿಹೀನರಿಗೆ ತಾವು ಯಾವರೀತಿಯಲ್ಲಿ ಈ ತಿದ್ದುಪಡಿಯಿಂದ ಹಣ ಪಡೆದುಕೊಳ್ಳುವುದಕ್ಕೆ ಅನುಕೂಲಪಡಿಸಿಕೊಟ್ಟಿದ್ದೀರಿ ಎಂದು ಶ್ರೀ ಲಿಂಗಣ್ಣನವರು ಲೋಪವನ್ನೆತ್ತಿದರು. ಅದನ್ನು ಕೂಡ ಪರಿಶೀಲನೆಮಾಡಬೇಕಾದದ್ದು ಅಗತ್ಯವಾಗಿದೆ. ಇವೊತ್ತು ತಾನೆ ಮಾನ್ಯ ಮಂತ್ರಿಗಳು ಕೆಲವು ಅಂಕಿ ಅಂಶಗಳನ್ನೊದಗಿಸಿದರು. ನಮ್ಮ ದೇಶದಲ್ಲಿ ರೂರಲ್ ಇಂಡೆಬೆಡ್‌ನೆಸ್ ನುಮಾರು 24 ಕೋಟಿ ರೂಪಾಯಿಗಳಷ್ಟಿರಬಹುದು. ಈ ನಂಖ್ಯೆ ಯಾದರೂ ನಹ ಅಷ್ಟು ಖಚಿತವಾದ ನಂಖ್ಯೆಯಲ್ಲ. ಇಲ್ಲ ಹೇಗೆ employment exchange ನಂಸ್ಥೆಯವರು ನಿರುದ್ಯೋಗಸ್ಥರ ಹೆನರುಗಳನ್ನು ರಿಜಿಸ್ಟರ್ ಮಾಡಿಕೊಂಡು ಅಂಕಿ ಅಂಶಗಳನ್ನು ಶೇಖರಿಸಿ ಹೇಳುತ್ತಾರೆಯೋ ಹಾಗೆಯೇ statistics ಡಿಪಾರ್ಟ್‌ಮೆಂಟಿನವರು ಬ್ಯಾಂಕುಗಳ, ಕೋ-ಆಪರೇಟಿವ್ ನಂಸ್ಥೆಗಳ ಮೂಲಕ ನಾಲಗಳನ್ನು ಪಡೆದಿರುವವರ ಬಗ್ಗೆ ಅಂಕಿ ಅಂಶಗಳನ್ನು ರಿಜಿಸ್ಟ್ರಾರ್‌ರವರ ಮೂಲಕ ಸರ್ಕಾರ ದವರು ಶೇಖರಿಸಿ ಒಂದು ಅಂದಾಜು ಲೆಕ್ಕ ಹಾಕಿ ನುಮಾರು 24 ಕೋಟಿ ರೂಪಾಯಿಗಳಷ್ಟು ನಾಲವಿದೆ ಎಂದು ಹೇಳಿರುತ್ತಾರೆ. ಈ ಅಂಕಿ ಅಂಶವನ್ನು ಒಪ್ಪಿಕೊಂಡರೂ ನಹ, ಈ ನಾಲದ ವ್ಯವನ್ಥೆಯನ್ನು ಪರಿಹರಿನುವ ವಿಚಾರದಲ್ಲಿ ಇನ್ನೂ ಎಷ್ಟೋ ಭೂಮಿಕಾಣಿ ಇಟ್ಟುಕೊಂಡಿರುವ ಎಷ್ಟೋಮಂದಿ ನಾಲಗಾರರು ಇರುತ್ತಾರೆ. ಇಂದು ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ರೈತವರ್ಗದ ಮೇಲೆ ನಿಂತಿದೆಯೆಂದು ತಜ್ಞರು ಅಭಿಪ್ರಾಯ ಪಟ್ಟಿರುತ್ತಾರೆ. ನಮ್ಮ ದೇಶದ ರೈತ ನಾಲದಲ್ಲಿಯೇ ಹುಟ್ಟಿ, ನಾಲದಲ್ಲಿಯೇ ಬದುಕಿ, ನಾಲದಲ್ಲಿಯೇ ನಾಯುತ್ತಾನೆ. ಇಂಥ ಹಲವಾರು ಉದಾಹರಣೆಗಳನ್ನು ನಾವು ಇಂದು ಹಳ್ಳಿಗಳಲ್ಲಿ ನೋಡಬಹುದು. ಅಜ್ಜನ ನಾಲ ಮೊಮ್ಮಗನ ಕಾಲಕ್ಕೂ ತೀರಿರುವುದಿಲ್ಲ. ವಂಶಪಾರಂಪರ್ಯವಾಗಿ ಈ ನಾಲ ಬೆಳೆದುಕೊಂಡು ಬಂದು, ಈ ಬಗ್ಗೆ ಅಲ್ಪ ಸ್ವಲ್ಪ ಜಮೀನು ನಹ ಕಳೆದುಕೊಂಡವರಿದ್ದಾರೆ. ಆದರೂ ನಹ ಧೃತಿಗೆಡದೆ ಆತನು ಭೂಮಿಯನ್ನೇ ಆಶ್ರಯಿನಿಕೊಂಡು ಗೇಣೀದಾರನಾಗಿ ಬಾಳ್ವೆಯನ್ನು ನಾಗಿನುತ್ತಿರುತ್ತಾನೆ. ಆತನು ಪೂರ್ಣವಾಗಿ ನಾಲದಿಂದ ವಿಮೋಚನೆ ಹೊಂದುವ ಸ್ಥಿತಿಯಲ್ಲೇ ಇರುವುದಿಲ್ಲ. ಇಂಥ ವ್ಯಕ್ತಿಗೆ ಸಹಕಾರನಂಘಗಳ ಮೂಲಕ ಆತನ ಋಣವಿಮೋಚನೆಗೆ ಬೇಕಾದ ಹಣವನ್ನು ಕೊಡಲು ನಾಧ್ಯವೇ ಎಂಬುದನ್ನು ಪರಿಶೀಲನಬೇಕು.

ಈ ತಿದ್ದುಪಡಿಯಲ್ಲಿ ಅತಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ—22-A (i). ಅದು ಈ ರೀತಿ ಇದೆ :

"Any person who makes an application to a society of which he is a member for a loan shall, if he owns any land, make a declaration in the prescribed form. Such declaration shall make that the applicant thereby creates a charge of the land owned by him and specified therein for the payment of the amount of the loan which the society may make to the member in pursuance of the application and for all future advances, if any, required by him which the society may make to him as such member subject to such maximum as may be determined by the society together with interest on such amount of the loan and advances."

ಈ ರೀತಿ ಒಬ್ಬ ರೈತ ಸಾಲ ಪಡೆಯಬೇಕಾದರೆ ತನ್ನ ಭೂಮಿಯನ್ನೆಲ್ಲಾ ಸಹಕಾರಸಂಘಕ್ಕೆ ಬರೆದು ಕೊಡಬೇಕಾಗುತ್ತದೆ. ಸಾಲ ತೀರಿಸುವವರೆಗೂ ಆತನಿಗೆ ಆ ಭೂಮಿಯಮೇಲೆ claim ಬರುವ ಹಾಗಿಲ್ಲ. ಆತನು 500 ರೂಪಾಯಿಗಳಷ್ಟು ಸಾಲ ತೆಗೆದು ಕೊಂಡರೆ ಅದಕ್ಕೆ ತಕ್ಕಷ್ಟು ಮಾತ್ರ ಭೂಮಿಯನ್ನು ಸಹಕಾರಸಂಘದವರು ಆಧಾರವಾಗಿ ಏಕೆ ಬರೆಸಿಕೊಳ್ಳಬಾರದು ? ಇದಕ್ಕಾಗಿ ಆತನ ಪೂರ್ತಿ ಭೂಮಿಯನ್ನು lease ಮಾಡಿಕೊಳ್ಳುವ ಅಗತ್ಯವೇನಿದೆ ? ಹೀಗೆ ಆದರೆ ಆತನು ಸಾಲಶೋಲಗಳಿಂದ ತಪ್ಪಿಸಿಕೊಳ್ಳುವುದು ಕಷ್ಟವಾಗುತ್ತದೆ ಎಂಬುದು ಮುಖ್ಯಾಂಶ. ಈ ತಿದ್ದುಪಡಿಯ ಉದ್ದೇಶವಾದರೂ, ಸಾಲಮಾಡಿರುವವನಿಂದ ಹಣ ವಾಪಸ್ಸು ಬಾರದಿದ್ದರೆ ಆತನು ಆಧಾರಮಾಡಿರುವ ಆಸ್ತಿಯಿಂದ ಆ ಹಣವನ್ನು ವಾಪಸ್ಸು ಪಡೆಯಲು ಸಹಕಾರಸಂಘಕ್ಕೆ ಮೊದಲವಕಾಶವಿರಬೇಕು ಎಂಬುದು. ಇದಕ್ಕೆ ಶ್ರೀ ಎಸ್. ಶ್ರೀನಿವಾಸಯ್ಯಂಗಾರ್‌ರವರು ಸೂಚಿಸಿರುವಹಾಗೆ, ಈಗಾಗಲೇ ಇರುವ ಕಾನೂನಿನ 22ನೆಯ ಸೆಕ್ಷನ್‌ನಲ್ಲಿ ಅವಕಾಶ ಕಲ್ಪಿಸಿದೆ. ಹೀಗಿದ್ದರೂ ಈ 20 (A) (i)ರ ತಿದ್ದುಪಡಿ ಅವಶ್ಯಕತೆ ಏನು ಇತ್ತು ?

ಇಷ್ಟೇ ಅಲ್ಲದೆ 22-A (ii) ರಲ್ಲಿ —

"A declaration made under clause (i) may be varied at any time by a member with the consent of the society in favour of which such charge is created"

ಎಂದೂ, 22-A (iii) ರಲ್ಲಿ—

"No member shall alienate the whole or any part of the land specified in the declaration made under clause (i) or varied under clause (ii) until the whole amount borrowed by the member together with interest thereon is paid in full"

ಎಂದೂ ತಿದ್ದುಪಡಿಗಳನ್ನು ಸೂಚಿಸಲಾಗಿದೆ. ಸಹಕಾರಸಂಘದ ಮೂಲಕ ಒಬ್ಬನು ಸಾಲ ಪಡೆದನೆಂದರೆ ಅದನ್ನು ಆತನು ತೀರಿಸುವವರೆಗೆ ಆತನ ಪೂರ್ಣ ಆಸ್ತಿಯ ಮೇಲೆ ಸರ್ವಹಕ್ಕೂ ಬಿಡಬೇಕು. ಆತನು ಮತ್ತಾವ ಮಾರ್ಗದಲ್ಲಿಯೂ ಬೇರೆ ಮಾರ್ಗ ಹುಡುಕುವ ಹಾಗೆಯೇ ಇಲ್ಲ.

ಸಹಕಾರಸಂಘಗಳು ಸ್ವಯಂಪ್ರೇರಿತವಾಗಿ ನಡೆಯಬೇಕು, ಪ್ರಜಾಪ್ರಭುತ್ವ ತತ್ವಗಳ ಆಧಾರದಮೇಲೆ ಅವುಗಳು ಉಳಿಯಬೇಕು, ಸ್ವಪರಿಪೂರ್ಣತೆ ಮತ್ತು ಸ್ವಶಕ್ತಿಯಿಂದ ಅವು ಬೆಳೆಯಬೇಕು. ಹೀಗಲ್ಲದೆ ಅವುಗಳನ್ನು ಉನ್ನತಮಟ್ಟಕ್ಕೆ ಎತ್ತಬೇಕು ಎಂದು ಸರ್ಕಾರ ಪ್ರಯತ್ನಪಟ್ಟರೆ ಅದು ಊರ್ಜಿತವಾಗುವುದಿಲ್ಲ. ಜನರ ಸಂಘಟಕ ಮನೋಭಾವದಿಂದ, ಸಹಕಾರ ಮನೋಭಾವದಿಂದ ಅವು ಏಳಿಗೆಗೆ ಬರಬೇಕು. ಹಾಗಿಲ್ಲದೆ ರಿಜಿಸ್ಟ್ರಾರ್‌ರವರಿಗೆ ಸಹಕಾರಸಂಘಗಳ ವಿಚಾರದಲ್ಲಿ ಸರ್ವಾಧಿಕಾರ ಕೊಡುವುದೆಂದರೆ ಎಂದಿಗೂ ಸಾಧುವಾದುದಲ್ಲ.

ಅದಕ್ಕಾಗಿಯೇ ಈ ಸಭೆಯಮುಂದೆ ನಮ್ಮ ಮಾನ್ಯ ಸದಸ್ಯರನೇಕರು ಈ ಸಂಸ್ಥಾನದಲ್ಲಿ ಮಾರಜೋರಿಯಂ ಆಕ್ಟ್ ತರುತ್ತೀರಾ ಎಂದು ಕೇಳಿದರು. ಅದಕ್ಕೆ ಮಾನ್ಯ ಮಂತ್ರಿಗಳು ಈಗ ಅಗತ್ಯವಿಲ್ಲ, ಹಾಗೇನಾದರೂ ಮಾರಜೋರಿಯಂ ಆಕ್ಟ್ ನಮ್ಮ ಸಂಸ್ಥಾನದಲ್ಲಿ ಜಾರಿಗೆ ತರುತ್ತೇವೆ ಎಂದರೆ ಖಾಸಗೀ ಮನುಷ್ಯರು ಸಾಲಗಳನ್ನು ಕೊಡುವುದನ್ನೇ ಬಿಟ್ಟು ಬಿಟ್ಟು, ಖಾಸಗೀ ಹಣ ಸಾಲದ ರೂಪದಲ್ಲಿ ಬರುವುದಿಲ್ಲ, ಆಗ ರೈತರಿಗೆ ಸಾಲ ದೊರಯದೆ ಮತ್ತಷ್ಟು ಕಷ್ಟವಾಗಬಹುದು ಎಂದು ಹೇಳಿದ್ದಾರೆ. ಆದರೆ ಯಾವಾಗ ತಾವು ಇಂಥ ಒಂದು ನಿಯಮವನ್ನು ತಂದು ಸಹಕಾರ ಸಂಘದ ಮುಖಾಂತರವೇ ಆತ ತನ್ನ ಎಲ್ಲಾ ಹಣ ಕಾಸಿನ ವ್ಯವಸ್ಥೆಯನ್ನೂ ವ್ಯವಹಾರವನ್ನೂ ನಡೆಸಿಕೊಂಡು ಹೋಗಲಿ, ಅವನು ಖಾಸಗಿ ಸಾಲಗಾರರ ಕೈಯಿಂದ ಮುಕ್ತನಾಗಲಿ ಎಂಬ ಉದ್ದೇಶ ಹೊಂದಿದ್ದ ಪಕ್ಷದಲ್ಲಿ ಇದಕ್ಕೆ ಬದಲಾಗಿ ಮಾರಜೋರಿಯಂ ವ್ಯವಸ್ಥೆಯನ್ನೇ ತರಬೇಕಾಗುತ್ತದೆ. ಇಲ್ಲದೇ ಹೋದರೆ ಈಗ ಕೋ ಆಪರೇಟಿವ್ ಸೊಸೈಟಿಯಲ್ಲಿ ಸದಸ್ಯನಾಗಿ ತನ್ನ ಭೂಮಿಯನ್ನು ಅಲ್ಲಿ ಒತ್ತೆ ಇಟ್ಟು 500 ರೂಪಾಯಿ ಸಾಲ ತೆಗೆದುಕೊಳ್ಳುತ್ತಾನೆ ಎಂದು ಗೊತ್ತಾದರೆ 200 ರೂಪಾಯಿ ಸಾಲಕೊಟ್ಟರುವವನು ಅಥವಾ 100 ರೂಪಾಯಿ ಸಾಲ ಕೊಟ್ಟರುವವನು ಅಡ್ಡಿ ಬರುತ್ತಾನೆ, ನೀವು ಆ ರೀತಿ ಭೂಮಿ ಮೇಲೆ ಇಂಟರೆಸ್ಟ್ ಕ್ರಿಯೇಟ್ ಮಾಡಕೂಡದು ಅಂತ ಹೇಳುತ್ತಾನೆ. ನನಗೆ ಈಡು ಮಾಡುತ್ತೀನೆ ಎಂದು ಹೇಳಿದ್ದಾನೆ, ನನಗೆ ಖರೀದಿಗೆ ಬರೆದು ಕೊಡುತ್ತೀನೆ ಎಂದು ಹೇಳಿದ್ದಾನೆ. ಈಗ ಆ ಭೂಮಿಯನ್ನು ಸೊಸೈಟಿ ಸಾಲದ ಬಗ್ಗೆ ಚಾರ್ಜು ಕ್ರಿಯೇಟ್ ಮಾಡಿದ್ದೇ ಆದರೆ ನನ್ನ ಸಾಲವನ್ನು ಮೊದಲು ತೀರಿಸಲಿ ಎಂದು ಆತ ಒತ್ತಾಯ ಮಾಡಬಹುದು. ಆ ಪಾದವನ್ನು ಕೂಡ ಇಲ್ಲಿ 22 (A) ತಿದ್ದುಪಡಿಯನ್ನು ಅಡಕ ಮಾಡಬೇಕಾದರೆ ವಿಚಾರ ಮಾಡಬೇಕಾಗುತ್ತದೆ.

ಆಮೇಲೆ ಈ ಲೆಕ್ಕ ಪತ್ರಗಳನ್ನು ಹಾಜರ್ ಪಡಿಸುವುದು. ಶ್ರೀವರ್ಮಾ ಚೆನ್ನಬಸಪ್ಪನವರು ಈ ಲೆಕ್ಕ ಪತ್ರಗಳನ್ನು ಹಾಜರ್ ಪಡಿಸುವ ವಿಧಿ ಇರುವುದರಿಂದಲೇ ಅನೇಕವೇಳೆ ಯಾರೋ ಒಬ್ಬರು ಆಸಕ್ತಿ ಉಳ್ಳ ಮಹನೀಯರು ಲೆಕ್ಕಪತ್ರಗಳನ್ನು ಹಾಜರ್ ಪಡಿಸಿ

(SRI S. GOPALA GOWDA)

ಎಂದು ಕೇಳುತ್ತಾರೆ, ಅದರಿಂದಲೇ ಎಷ್ಟೋವರ್ಷ ಈ ಸೊಸೈಟಿಗಳ ವಿವಾದ ತೀರ್ಮಾನವಾಗುವುದಕ್ಕೆ ಅಡ್ಡಿ ಬರುತ್ತದೆ ಎಂದು ಹೇಳಿದ್ದಾರೆ. ಈಗ as a special case ಅದನ್ನು ಹಾಜಂ ಪಡಿಸಬಹುದು ಎಂದಿದೆ. 30, ಸಬ್ ಸೆಕ್ಷನ್ (2) ರಲ್ಲಿ.—

"30 (2): No officer or liquidator of a registered society and no officer in whose office the books of a registered society are deposited after liquidation shall, in any legal proceedings to which the society or the liquidator is not a party, be compelled to produce any of the society's books the contents of which can be proved under sub-section (1), or to appear as a witness to prove the matters, transactions and accounts therein recorded, except by order of the court made for special cause."

ಈ ವಿಧಿಯನ್ನು ಕೂಡ ನಾವು ಪರಿಶೀಲನೆ ಮಾಡಬೇಕಾಗುತ್ತದೆ. ಸಾಲ ಕೊಡುವುದು, ಷೇರುಗಳನ್ನು ಕೊಂಡುಕೊಳ್ಳುವುದು ಮತ್ತು ಸರ್ಕಾರದವರು ಹಣ ಸಹಾಯವನ್ನು ಮಾಡುವುದಕ್ಕೆ ಸಂಬಂಧಪಟ್ಟ 32 A ಸೆಕ್ಷನ್ ಮುಖ್ಯವಾದದ್ದು, ಮತ್ತು ಇದೇ ಸರ್ಕಾರದ ವರು ಈ ತಿದ್ದುಪಡಿ ಮಸೂದೆಯನ್ನು ತರುವುದಕ್ಕೆ ಮೂಲವಾದ ಕಾರಣ ಎಂದು ಅವರು ಹೇಳಿದ್ದಾರೆ.

"Notwithstanding anything contained in any other enactment, the State Government may, subject to such rules as may be prescribed in this behalf, grant loans to, take shares in, or give financial assistance in any other form to any registered society."

ಇದರಲ್ಲಿ ಮೊದಲನೆಯದಾಗಿ, ಸಹಕಾರ ಸಂಘದಲ್ಲಿ ಸರ್ಕಾರ ಷೇರುಗಳನ್ನು ಕೊಂಡುಕೊಳ್ಳುವುದು ತಾತ್ಪರ್ಯಕವಾಗಿ ಸಮಂಜಸವೇ ಎಂಬ ತತ್ವ, ವಿವಾದ ತೀರ್ಮಾನವಾದಮೇಲೆ ಸರ್ಕಾರ ಯಾವ ರೀತಿ ಸಹಾಯ ಮಾಡಬಹುದು ಎಂಬುದನ್ನು ಕೂಡ ನಾವು ಯೋಚನೆ ಮಾಡಬೇಕು. ಶ್ರೀಮಾನ್ ಪಟ್ಟಾಭಿರಾಮರವರು ಹೇಳಿದರು, ತಮಗೆ ಈ ಹಣವನ್ನು ಏಲೇವಾರಿ ಮಾಡಬೇಕು ಎಂದು ಇದ್ದರೆ ತಾವೇ ರೂರಲ್ ಕ್ರೆಡಿಟ್ ಬ್ಯಾಂಕ್ಸ್ ಎಂಬುದಾಗಿ ಎಲ್ಲಾ ತಾಲ್ಲೂಕುಗಳಲ್ಲೂ ತೆಗೆಯಬಹುದು, ಅದಕ್ಕೆ ಬೇರೆ ಒಂದು ಮಸೂದೆಯನ್ನೇ ತಂದು, ಈ ಸಹಕಾರ ಸಂಘದ ಕಾನೂನು ತಿದ್ದುಪಡಿ ಮಾಡುವ ಹವ್ಯಾಸಕ್ಕೇ ಹೋಗದೆ ಹಣವನ್ನು ಯಾವರೀತಿ ಭದ್ರತೆಯ ಮೇಲೆ ರೈತರಿಗೆ ಕೊಡಬಹುದೋ ಅಂಥ ಒಂದು ಕಾನೂನನ್ನ ಮಾಡುವುದಕ್ಕೆ ಯಾವ ಅಡ್ಡಿ ಇದೆ ಎಂದು. ಬಹುಶಃ ನನಗೆ ಅನ್ನಿಸುತ್ತದೆ. ಸರ್ಕಾರದವರು ಬೇರೆ ಒಂದು ಕಾನೂನನ್ನು ಜಾರಿಗೆ ತಂದು ರಿಜರ್ವ್ ಬ್ಯಾಂಕಿನಿಂದ ಹಣ ಪಡೆದು ಹಳ್ಳಿಗಾಡಿನಲ್ಲಿ ಸಾಲಕೊಡತಕ್ಕ ಬ್ಯಾಂಕುಗಳನ್ನು ನಿರ್ಮಾಣ ಮಾಡಿ ಕೆಲಸ ಮಾಡಬೇಕೆಂದರೆ ಬಹುಶಃ ಅದು ಬಹಳ ದೊಡ್ಡ ಎಸ್ಟಾಬ್ಲಿಷ್‌ಮೆಂಟ್ ಆಗುತ್ತದೆ, ಅಂಥ ಒಂದು ವ್ಯವಸ್ಥೆಯನ್ನು ನಿರ್ಮಾಣ ಮಾಡುವುದಕ್ಕೆ ತಡ ಆಗುತ್ತದೆ, ಆದರಿಂದ ಈಗಿರತಕ್ಕ ಕೋ ಆಪರೇಟಿವ್ ಸೊಸೈಟಿಗಳ ಮುಂಖಾಂತರವೇ ಈ ಲೇವಾದೇವಿ ಪ್ರಾರಂಭಿಸುವುದು ಹೆಚ್ಚು ಲಾಭದಾಯಕ ಮತ್ತು ಹೆಚ್ಚು ಸುಲಭ ಎಂದು ಹೇಳಿ ಬಹುಶಃ ಸರ್ಕಾರ ಭಾವಿಸಿ ಈ ಮಸೂದೆಯನ್ನು ತಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆ ರೀತಿ ಯೋಚನೆ ಮಾಡಿರತಕ್ಕದ್ದು ಸಾಧುವಾದದ್ದೇ. ಆದರೆ ಈ ಹಣ ಕೊಡುವ ಒಂದು ನೆಪದಲ್ಲಿ.....

ಶ್ರೀ ಎಚ್. ಹುಚ್ಚಮಾಸ್ತಿ ಗೌಡ (ಹುಲಿಯೂರು ದುರ್ಗ).—ಸ್ವಾಮಿ, ಈಗ ಸಾಕಾದಷ್ಟು ಚರ್ಚೆ ಆಗಿರುವುದರಿಂದ ಚರ್ಚೆ ಮುಕ್ತಾಯವಾಗಬೇಕೆಂದು ನೂಚನೆ ಮಾಡುತ್ತೇನೆ.

Sri J. MOHAMED IMAM (Jagalur).—I take objection to this, Sir. When an Hon'ble Member is on his legs, he cannot move for closure.

Mr. SPEAKER.—The Hon'ble Member has taken three-fourth of an hour and he will close early. We shall not be guided by other things.

ಶ್ರೀ ಎಸ್. ಗೋಪಾಲಗೌಡ.—ನಾನು ಮುಗಿಸುತ್ತಾ ಇದ್ದೆ. ನಾನು ಯೋಚನೆ ಮಾಡುತ್ತಾ ಇರುವುದರಲ್ಲಿ ಈ ತಿದ್ದುಪಡಿಯನ್ನು ಅವರು ವಾಪಸು ತೆಗೆದುಕೊಳ್ಳುವುದೆಂದರೆ ಸರಿ, ಅಥವಾ ಕಾನೂನು ಇರುವರೀತಿಯಲ್ಲಿ ಇಡುವುದಾದರೆ ನಾನು ಹೆಚ್ಚು ಹೊತ್ತು ಮಾತನಾಡಬೇಕಾದ ಪ್ರಮೇಯ ಇರಲ್ಲಿಲ್ಲ. ಈ ತಿದ್ದುಪಡಿ ಸೆಲೆಕ್ಟ್ ಕಮಿಟಿಗೆ ರೆಫರ್ ಆಗಬೇಕೆಂಬ ನೂಚನೆ ಕೂಡ ಈಗಾಗಲೇ ಸಭೆಯ ಮುಂದೆ ಇದೆ. ಮತ್ತು ಸರ್ಕಾರ ಈ ಬಗ್ಗೆ ಒಂದು ಕಾತರತೆಯನ್ನು ತೋರಿಸುತ್ತಾ ಇರುವುದು ಕೂಡ ಕಂಡು ಬರುತ್ತದೆ. ನಾನಾದರೋ ಅಂಥ ಒಂದು ಕಾತರತೆಯನ್ನು ಸ್ವಾಗತಿಸತಕ್ಕವನೇ ಮತ್ತು ರೈತರಿಗೆ ಸಾಲದೊರೆಯುತ್ತದೆ, ಹೆಚ್ಚಿನ ಸೌಲಭ್ಯ ದೊರೆಯುತ್ತದೆ ಮತ್ತು ಅದಕ್ಕಾಗಿಯೇ ಸರ್ಕಾರದವರು ಮಹತ್ ಪ್ರಯತ್ನ ಮಾಡುತ್ತಾ ಇದ್ದಾರೆ ಎಂದರೆ ಅದನ್ನು ನಾನು ಸ್ವಾಗತಿಸದೆ, ಅದಕ್ಕೆ ಕೈಲಾದ ಅಡಚಣೆಯನ್ನುಂಟು ಮಾಡಬೇಕು ಅಥವಾ ಹೆಚ್ಚುಕಾಲ ಉಪಯೋಗಿಸಿಕೊಂಡು ಇಂಥ ಒಂದು ಕಾನೂನು ಜಾರಿಗೆ ಬಾರದ ರೀತಿಯಲ್ಲಿ ತಡೆ ಹಿಡಿಯಬೇಕೆಂಬ ಅಭಿಪ್ರಾಯ ನನಗಿಲ್ಲ.

12 NOON.

ಈ ತಿದ್ದುಪಡಿ ಕೆಲವು ತತ್ವಗಳಿಗೆ ವಿರೋಧವಾಗಿದೆ ಅನ್ನುವ ಅಭಿಪ್ರಾಯ ಈ ಮಾನ್ಯಸಭೆಯಲ್ಲಿ ಪ್ರಧಾನವಾಗಿ ಬಂದಿದೆ. ಶ್ರೀ ಶ್ರೀನಿವಾಸಯ್ಯಂಗಾರ್ ಅವರು ಈ ಸಹಕಾರ ತತ್ವವನ್ನು ಚೆನ್ನಾಗಿ ತಿಳಿದವರೂ ಮತ್ತು ಈ ಸಂಘಗಳಲ್ಲಿ ಕೆಲಸಮಾಡಿ ಹೆಚ್ಚಿನ ಪರಿಶ್ರಮಪಡೆದಿರುವವರೂ ಆಗಿದ್ದಾರೆ. ಅವರು ತಮ್ಮ ಅನುಭವದಿಂದ ಕೆಲವು ಸಲಹೆಗಳನ್ನು ನೀಡಿದ್ದಾರೆ. ಅದೇರೀತಿಯಲ್ಲಿ ಶ್ರೀ ಕೆ. ಪಟ್ಟಾಭಿರಾಮರವರು ಆರ್ಥಿಕ ವಿಷಯಗಳ ಬಗ್ಗೆ ಮತ್ತು ದೇಶದ ಆರ್ಥಿಕಸ್ಥಿತಿ ಮುಂದೆ ಯಾವರೀತಿಯಲ್ಲಿ ಬದಲಾವಣೆಯಾಗಬೇಕು, ಯಾವರೀತಿ ಸಹಕಾರ ತತ್ವ ಬೆಳೆಯಬೇಕು, ಜೆಕೋಸ್ಲವೇಕಿಯ ಮುಂತಾದ ಇತರ ಮುಂದುವರಿದ ದೇಶಗಳಲ್ಲಿ ಹೇಗೆ ನಡೆಯುತ್ತಿದೆ ಎಂಬು

ದನ್ನು ಗಮನಿಸಿ ತಕ್ಕವ್ಯ ವಸ್ಥೆ ಮಾಡಬೇಕೆಂದು ಸೂಚಿಸಿದ್ದಾರೆ. ಎರಡನೆಯದಾಗಿ, ಈಗಿರುವ ಪದ್ಧತಿಯೇ ಪ್ರಪಂಚದ ಯುದ್ಧಕಾಲದಲ್ಲೂಕೂಡ ನಡೆದುಕೊಂಡು ಬಂದಿದೆ. ಅಂಥಾವ್ಯವಕ್ಕೆ ತಿದ್ದುಪಡಿಮಾಡಿ ಸೊಸೈಟಿಗಳಿಗೆ ಹಣ ಕೊಡುತ್ತೇವೆ, ಸಹಾಯ ಮಾಡುತ್ತೇವೆ ಎಂಬ ನೆಪದಿಂದ ಮೈಸೂರು ಸರ್ಕಾರದವರು ಬುಡಕ್ಕೇ ಕೊಡಲು ಹಾಕುತಿದ್ದಾರೆ ಎಂದು ಸಹ ಮಾನ್ಯ ಸದಸ್ಯರು ಹೇಳಿದರು. ಇಷ್ಟು ತಿಳಿದಿರುವ ಮಾನ್ಯ ಸದನ್ಯರು ಒಂದು ಅಭಿಪ್ರಾಯ ವ್ಯಕ್ತಪಡಿಸಿರುವಾಗ ನೀವಾದರೂ ಕೂಡ ಇದನ್ನು ಪಿಚಾರ ಮಾಡುವುದು ಅಗತ್ಯ, ಪರಿಣಾಮ ವೇನಾಯೀತೆಂಬುದನ್ನು ಕೂಲಂಕಷವಾಗಿ ಪರಿಶೀಲಿಸುವುದು ನಿಮ್ಮ ಆದ್ಯಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಈಗಾಗಲೇ ಬೆಳೆದುಬಂದಿರುವ ಪದ್ಧತಿಯಮೇಲೆ ಇದು ಆಘಾತವನ್ನುಂಟು ಮಾಡುವುದಾದರೆ, ಅವಸರದಿಂದ ಈ ಒಂದು ತಿದ್ದುಪಡಿ ತರುವುದರಿಂದ ಈಗಿರುವುದಕ್ಕೆ ತೊಂದರೆಯಾಗುವುದಾದರೆ ಇಂಥಾದ್ದಕ್ಕೆ ನಾವು ಕೈಹಾಕಬೇಕೆ ಎಂಬುದೇ ಮುಖ್ಯ ಪ್ರಶ್ನೆ. ಈ ಸಂಶಯವಿಲ್ಲದಿದ್ದರೆ ನಾನಾದರೂ ಮಾತನಾಡುತ್ತಿರಲಿಲ್ಲ. ಆದ್ದರಿಂದ ಈ ತಿದ್ದುಪಡಿಗಳಮೇಲೆ ಹೆಚ್ಚಿನ ಬೆಳಕನ್ನು ಬೀರುವುದಾದರೆ ಮತ್ತು ಇವುಗಳ ಪರಿಣಾಮವನ್ನು ಪೂರ್ಣವಾಗಿ ಗ್ರಹಿಸಬೇಕಾದರೆ ಚರ್ಚೆ ಮಾಡಬೇಕಾದದ್ದು ಅಗತ್ಯವಾಗಿದೆ. ಸರ್ಕಾರದವರು ಹಣಕಾಸಿನ ಸೌಲಭ್ಯವನ್ನೇರ್ಪಡಿಸುವುದರಿಂದ ಯಾವ ರೀತಿಯಲ್ಲಿ ಎಲ್ಲರಿಗೂ ಅನುಕೂಲವಾಗುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕು. ಜಮೀನಿಲ್ಲದವರೇನಿದ್ದಾರೋ ಅವರಿಗೆ ಬೆಳೆಗಳಮೇಲೆ ಸಾಲವನ್ನು ಕೊಡುವುದಕ್ಕೆ ಸರ್ಕಾರ ಇಷ್ಟಪಟ್ಟಿದೆಯೆಂದು ನಾವು ತಿಳಿದುಕೊಂಡರೂ ಕೂಡ ಈಗಿರುವ ಪದ್ಧತಿಯಲ್ಲಿ ಅವರಿಗೆ ಹಣ ದೊರೆಯುವುದಿಲ್ಲ. ಈ ಅಂಶವನ್ನು ಪರಿಶೀಲನೆ ಮಾಡಿ ಇದಕ್ಕೆ ಒಂದು ತಿದ್ದುಪಡಿಯನ್ನು ತರಬೇಕಾದದ್ದು ಅಗತ್ಯವೆಂದು ನಾನು ತಿಳಿದುಕೊಂಡಿದ್ದೇನೆ.

ಅನಂತರದಲ್ಲಿ ಕೋರ್ಟುಗಳಿಗಿರುವ ಅಧಿಕಾರವನ್ನು ರಿಜಿಸ್ಟ್ರಾರರಿಗೆ ಕೊಡಬೇಕು ಎಂದು ಹೇಳುತ್ತಾರೆ. ಇದೊಂದು ಮಹತ್ವದ ಪ್ರಶ್ನೆ. ಪ್ರಜಾಪ್ರಭುತ್ವವನ್ನು ಕಾಪಾಡುವುದಕ್ಕೆ ಸರಿಯಾದ ಅಧಿಕಾರವುಳ್ಳಂಥ ಕಾನೂನನ್ನು ಮಾಡಿದ ಮಾತ್ರಕ್ಕೆ ಪ್ರಜಾಪ್ರಭುತ್ವಕ್ಕೆ ಹೇಗೆ ನಾಚಿಕೆಯಾಗುತ್ತದೆ ಎಂದು ಹೇಳಿದರು. ಪ್ರಜಾಪ್ರಭುತ್ವದಲ್ಲಿ ಒಬ್ಬ ವ್ಯಕ್ತಿಯ ಹಕ್ಕು ಬಾಧ್ಯತೆಗಳು ಮೊಟಕಾಗಬಾರದು, ಅದಕ್ಕೆ ಪೂರ್ಣ ಅವಕಾಶ ವಿರಬೇಕು. ಹಾಗೆ ಹೇಳುವಾಗ ಯಾರು ನ್ಯಾಯ ತೀರ್ಮಾನ ಮಾಡುತ್ತಾರೆಂಬುದು ಬಹಳ ಮುಖ್ಯವಾದ ಅಂಶ. ರಿಜಿಸ್ಟ್ರಾರರೇ ಎಲ್ಲಾ ನ್ಯಾಯ ತೀರ್ಮಾನವನ್ನೂ ಮಾಡುವುದಾದರೆ ಅದರಿಂದ ಎಷ್ಟುಮಟ್ಟಿಗೆ ಪ್ರಜಾಪ್ರಭುತ್ವಕ್ಕೆ ಮನ್ನಣೆ ದೊರೆಯಲು ಸಾಧ್ಯ ಎಂಬುದನ್ನು ಎಲ್ಲರೂ ಊಹಿಸಿಕೊಳ್ಳಬಹುದು. ತಕ್ಷಣ ಕೆಲಸಗಳಾಗಬೇಕು, ನಮ್ಮ ಮನಸ್ಸಿನಪ್ರಕಾರ ಕೆಲಸವಾಗಬೇಕು ಎಂದು ಹೇಳಿದರೆ ಅದು ಹೊಟಾಲಿ ಚೇರಿಯರ್ ಪದ್ಧತಿಯಾಯಿತು.

ಶ್ರೀ ಡಿ. ದೇವರಾಜ ಅರಸ್.—ಕೊಟ್ಟವರಿಗೆ ಹಣಕ್ಕೆ ಬೇಗ ರಕ್ಷಣೆ ಸಿಕ್ಕಲಿ ಎಂದು ಮಾಡಿದೆ.

ಶ್ರೀ ಎಸ್. ಗೋಪಾಲಗೌಡ.—ರಕ್ಷಣೆ ಕೊಡುವ ವಿಧಾನವೇ ರಕ್ಷಣೆಗಿಂತ ಅಪಾಯಕಾರಿಯಾದರೆ ಹೇಗೆ? ನಿನ್ನ ತಲೆ ಕಾಪಾಡುತ್ತೇವೆಂದು ಹತ್ತು ಮಣದ ಗುಂಡು ಹೊರಿಸಿದರೆ ಕಾಪಾಡಿದ ಹಾಗಾಯಿತೆ! ಬಿಸಿಲಿಗೆ ರಕ್ಷಣೆ ನೀಡಲು ಒಂದು ಛತ್ರಿಸಾಕು. ಹೀಗೆ ಪ್ರಜಾಪ್ರಭುತ್ವ ಕಾಪಾಡುತ್ತೇವೆ ಎಂದು ಒಬ್ಬ ಅಧಿಕಾರಿಗಳಿಗೆ ಮೇಲೆಮೇಲೆ ಹೆಚ್ಚುಹೆಚ್ಚಾಗಿ ಅಧಿಕಾರಗಳನ್ನು ಕೊಡುವುದು ಸರಿಯಾದ ನೀತಿಯೆ? ಅದರಿಂದ ಆಗಿರುವ ಪರಿಣಾಮವನ್ನು ಶ್ರೀಮಾನ್ ಚೆನ್ನಬಸಪ್ಪನವರು ಸಭೆಯ ಗಮನಕ್ಕೆ ತಂದಿದ್ದಾರೆ. ಇದಕ್ಕೆ ನಾವು ಕೃತಜ್ಞರೂ ಚಿರಋಣಿಗಳೂ ಆಗಿದ್ದೇವೆ. ಅವರು ಸೂಚಿಸಿದ ವರದಿಯನ್ನು ನಾನು ಓದಿಲ್ಲ. ಅಂಥ ಅಧಿಕಾರಿಗಳಿದ್ದರೆ 50 ಸಾವಿರ ರೂಪಾಯಿಗಳ ಸಾಲ ತೆಗೆದುಕೊಳ್ಳುವುದು ಎಷ್ಟು ಸುಲಭ?

ಶ್ರೀ ಎ. ಭೀಮಪ್ಪ ನಾಯಕ್.—ಅಂಥ ಅಧಿಕಾರಿಗಳಿಗೆ ಶಿಕ್ಷೆ ಮಾಡುವುದಕ್ಕೇ ಈ ಪ್ರಾವಿಷನ್‌ಗಳನ್ನೆಲ್ಲಾ ಮಾಡಿರುವುದು.

ಶ್ರೀ ಎಸ್. ಗೋಪಾಲಗೌಡ.—ಆದ್ದರಿಂದ ಪ್ರಜಾಪ್ರಭುತ್ವದ ಮಾತು ಬಂದಾಗ, ಸಹಕಾರ ತತ್ವದ ಮಾತುಬಂದಾಗ ಸಾಧ್ಯವಾದಮಟ್ಟಿಗೂ ಸರ್ಕಾರ ದೂರವಿರುವುದು ಮೇಲು. ಮಲ್ಟಿಪರ್ಪಸ್ ಸೊಸೈಟಿ ಸ್ಥಾಪಿಸಲು ಎಷ್ಟೋ ಕಷ್ಟಪಟ್ಟೆವು ಎಂದು ಹೇಳಬಹುದು. ಶೇಕದಾರರಿಗೆ ಷೇರು ವಸೂಲು ಮಾಡಿ ಎಂದು ಹೇಳಿದರು. ಅವರು ಬಹಳ ಉತ್ಸಾಹದಿಂದ ವಸೂಲು ಮಾಡಿದರು. ಆದರೆ ಲೆಕ್ಕದಲ್ಲಿ ಹೆಚ್ಚು ಕಡಮೆಯಾಯಿತು. ಹತ್ತಿರ ಹಣವಿದ್ದಾಗ ಖರ್ಚಾಗದಿರುವುದಿಲ್ಲ. ಸರ್ಕಾರದ ಹಣವಾದರೆ ಅದು ಕಷಿಯಾಗುತ್ತದೆಯೆ? ವಸೂಲು ಮಾಡಿ ತಮಗೆ ಬೇಕಾದಾಗ ಖರ್ಚಿಗೆ ಉಪಯೋಗಿಸಿಕೊಂಡುಬಿಟ್ಟರು. ಆಮೇಲೆ ವಸೂಲು ಮಾಡಿದ ಷೇರು ಹಣ ಡಿಪಾಜಿಟ್ ಮಾಡುವಾಗ ಕೈಲಿರಲಿಲ್ಲ. ಬೇರೆ ಹಣ ತೆಗೆದು ಕೊಂಡು ಡಿಪಾಜಿಟ್ ಮಾಡುವುದಕ್ಕೆ ಆ ಬಡ ನೌಕರರಿಗೆ ಬರುವುದು 60 ರೂಪಾಯಿಗಳ ಸಂಬಳ. ಅದರಿಂದ ಸಾಧ್ಯವಾಗಲಲ್ಲ. ಆಗ ಬೇರೆಯವರು 3-4 ಸಾವಿರ ರೂಪಾಯಿಗಳ ಸಾಲಕೊಟ್ಟು ಅವರ ಸಂಬಳದಲ್ಲಿ ಕ್ರಮವಾಗಿ ತೆಗೆದುಕೊಳ್ಳುತ್ತಿದ್ದರು. ಇಂಥ ಅವಸ್ಥೆಯಾಗುತ್ತದೆ. ಹಾಗಾಗಬಾರದಾಗಿತ್ತು, ನಿಜವಾಗಿಯೂ ಮಲ್ಟಿಪರ್ಪಸ್ ಸೊಸೈಟಿಗಳು ಹಾಳಾಗದೆ ಚೆನ್ನಾಗಿ ನಡೆಯಬೇಕಾಗಿತ್ತು. ಸರಿಯಾದ ಲೆಕ್ಕಪತ್ರವಿಲ್ಲದೆ, ಸಮಿತಿಯೂ ಸೂಪರ್‌ವಿಷ್ ಮಾಡುವುದಕ್ಕೆ ಅಧಿಕಾರವಿಲ್ಲದೆ, ಹಣಕಾಸಿನ ತನಿಖೆ ಮಾಡುವುದಕ್ಕೆ ಅಧಿಕಾರವಿಲ್ಲದೆ ಈ ರೀತಿಯಾಗಿ ಕೆಟ್ಟು ಹೋಗಿವೆ ಎಂಬ ವಾದ ಮಾಡಿದ್ದಾರೆ. ಆ ವಾದವನ್ನು ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಸಂಪೂರ್ಣವಾಗಿ ನಿರಾಕರಿಸಿದ್ದಾರೆ. ಈಗಿರುವ ಕಾನೂನನ್ನು ನಿಜವಾಗಿಯೂ ಸರಿಯಾಗಿ ಜಾರಿಗೆ ಕೊಟ್ಟಿದ್ದರೆ, ಅದಕ್ಕನುಸಾರವಾಗಿ ಅಧಿಕಾರಿಗಳು ಮತ್ತು ಸಹಕಾರ ಸಂಘದ ಆಡಳಿತ ವರ್ಗದವರು ನಡೆದಿದ್ದರೆ ಈ ರೀತಿಯಾಗಿ ದುರುಪಯೋಗವಾಗುವುದಕ್ಕೆ ಸಾಧ್ಯವೇ ಇರಲಿಲ್ಲ. ಕಾನೂನಿನ ಪ್ರಕಾರ ನಡೆದುಕೊಳ್ಳದೆಹೋದರೆ ಎಷ್ಟು ಅಧಿಕಾರ ಕೊಟ್ಟರೆ ತಾನೆ ಏನು ಪ್ರಯೋಜನ! ಹಿಂದುಗಳಿಗೇಕೆ ಚಕ್ರಾಯುಧ ಎಂದು ಶ್ರೀ ನಾಗರಾಜ ಮೂರ್ತಿಗಳು ಹೇಳಿದರು. ಹಾಗೆ ಕೈಲಿ ಅಧಿಕಾರವಿದ್ದರೇನುಪ್ರಯೋಜನ? ಅಧಿಕಾರ ಹೆಚ್ಚಾಗಿ ಕೊಟ್ಟಮಾತ್ರಕ್ಕೇ ಕೆಲಸ ಸಮರ್ಪಕವಾಗಿ ನಡೆಯುತ್ತದೆಂದು ಯಾರೂ ಊಹಿಸುವುದಕ್ಕಾಗುವುದಿಲ್ಲ. ಮುಖ್ಯವಾಗಿ ಕೋ-ಆಪರೇಟಿವ್ ಸೊಸೈಟಿ ವಿಚಾರ ನಾವು ಮಾತನಾಡುತ್ತಿರುವುದು. . . .

Mr. SPEAKER.—May I request Hon'ble Members of this House to finish at least this Bill today?

Sri Mulka GOVINDA REDDY.—Not possible, Sir.

Mr. SPEAKER.—I leave it to House. There is enough provision in the Rules for the Chair to exercise powers; but I do not want to exercise them. I will therefore leave it to the House. At least, this Bill may be referred to the Select Committee. There will be ample time to discuss the Bill after it comes from the Select Committee, during the next session. It will be advancing the cause of the raiyats or the people who are in need of help. Therefore I am requesting the Hon'ble Member at least to allow me to put this Bill, half an hour hence. I have no objection even if half an hour more is taken, if Hon'ble Members agree and pass this Bill on to the Select Committee, because you will be doing justice to the cause which we are supposed to support. Therefore I leave it to the House. If you want, you can have discussion till One of the Clock.

Sri N. HUCHMASTHY GOWDA.—I move for closure of the debate.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ನಗರ–ಉತ್ತರ).—ಮಾನ್ಯ ಸದಸ್ಯರು ಮಾತನಾಡುವುದು ಇನ್ನೂ ಎಷ್ಟು ಹೊತ್ತು ಹಿಡಿಯುತ್ತದೆ ಎಂಬುದು ಗೊತ್ತಾದರೆ ಇದನ್ನು ಇತ್ಯರ್ಥ ಮಾಡಬಹುದು.

Mr. SPEAKER.—How much time do you require ?

ಶ್ರೀ ಎಸ್. ಗೋಪಾಲಗೌಡ.—ನಾನು judicial rights ಹೇಗೆ ಇದರಿಂದ ಮೊಟಕು ಮಾಡಿದ ಹಾಗೆ ಆಗುತ್ತದೆ ಎಂಬುದನ್ನು ಪ್ರಸ್ತಾಪಿಸುತ್ತಿದ್ದೆ. ನಾನು ವ್ಯಕ್ತಪಡಿಸುತ್ತಿರುವ ಅಭಿಪ್ರಾಯಗಳಲ್ಲಿ ಪುನರುಕ್ತಿ ಯಾವುದೂ ಇಲ್ಲ. ಈಗಾಗಲೇ ಸಭಾಸದಸ್ಯರಿಗೆ ಬೇಜಾರಾಗಿದ್ದರೆ ನಾನು ಈಗಲೇ ಕುಳಿತುಕೊಳ್ಳುವುದಕ್ಕೆ ಸಿದ್ಧ.

Mr. SPEAKER.—I will leave it to the House.

ಶ್ರೀ ಎಸ್. ಗೋಪಾಲಗೌಡ.—ನನ್ನ ಭಾಷಣವನ್ನು ಜಾಗ್ರತೆ ಮುಗಿಸಬೇಕೆಂಬ ಒತ್ತಾಯ ಸೂಚನೆ ಈಗ ಬಂದಿರುವುದರಿಂದ ಈ ತಿದ್ದುಪಡಿ ಮಸೂದೆಯ ವಿಚಾರದಲ್ಲಿ ಸೂಚಿಸಬೇಕೆಂದಿರುವ ಕೆಲವು ಅಂಶಗಳನ್ನು ಬಿಡಬೇಕಾಗಿ ಬಂದಿದೆ. ಇಷ್ಟು ಮುಂಚಿತವಾಗಿ ಇಂದಿನ ಸಭೆ ಮುಗಿಯುತ್ತದೆಂದು ಗೊತ್ತಿರಲಿಲ್ಲ. ಇನ್ನೂ ಗಹನವಾದ ವಿಚಾರಗಳನ್ನು ತಿಳಿಸಬೇಕಾದುದು ಬೇಕಾದಷ್ಟು ಇದೆ.

Mr. SPEAKER.—That is beside the point. You have taken already one hour and ten minutes and spoken on the scope of the several provisions of the Bill. Therefore if you limit your time and adjust, we can easily put it to the vote and send the Bill on to the Select Committee.

Sri B. HUTCHE GOWDA.—They should have given more time to this side. They should have shown more restraint in their speeches.

Mr. SPEAKER.—I have no more time. I have given you enough time.

ಶ್ರೀ ಎಸ್. ಗೋಪಾಲಗೌಡ.—ಬೇಗ ಮುಗಿಸಲು ಪ್ರಯತ್ನ ಪಡುತ್ತೇನೆ, 14 (2) ರಲ್ಲಿ.

> "The order of the Registrar under sub-section (1) shall be final unless it is set aside by the Government on application made"

ಎಂದಿದೆ. ಈ ಅಧಿಕಾರ ರಿಜಿಸ್ಟ್ರಾರ್‌ರವರಿಗೆ ಕೊಡತಕ್ಕ ಪ್ರಮೇಯವೇನಿದೆ? ಕೊಡದೇ ಇದ್ದ ಮಾತ್ರಕ್ಕೇ, ಬೇರೆ ಇರತಕ್ಕ ವಿಧಿಗಳ ಆಧಾರದಮೇಲೆ ಹಣವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕಾಗಲಿ ಅಥವಾ ಸರ್‌ಚಾರ್ಜ್ ಹಾಕುವುದಕ್ಕಾಗಲಿ ಸಾಧ್ಯವಿಲ್ಲವೇ ಎಂಬುದು ವಾದಗ್ರಸ್ತವಾದ ಪ್ರಶ್ನೆ. ಇಲ್ಲಿ ಡಿಸ್ಟ್ರಿಕ್ಟ್ ಜಡ್ಜ್‌ರು ಚಲಾಯಿಸತಕ್ಕ ಅಧಿಕಾರವನ್ನು ರಿಜಿಸ್ಟ್ರಾರ್‌ರಿಗೆ ಕೊಡಬೇಕೆಂದಿದೆ. ಇದರಿಂದ ಹೆಚ್ಚಿನ ಅನಾಹುತ ವಾಗುವುದಕ್ಕೆ ಅವಕಾಶವಿದೆಯೆಂದು ನಾನು ತಿಳಿಯುತ್ತೇನೆ. ಕೋರ್ಟಿಗೆ ಹೋಗುವುದರಿಂದ ತಡವಾಗುತ್ತದೆ, ತಕ್ಷಣ ಪರಿಹಾರ ದೊರಕಿಸಿಕೊಳ್ಳುವುದಕ್ಕಾಗುವುದಿಲ್ಲವೆಂದು ಒಪ್ಪಿಕೊಂಡರೂ ಸಹ, ರಿಜಿಸ್ಟ್ರಾರ್‌ರವರು ಒಂದು ಮಹತ್ತರವಾದ, ಗುರುತರವಾದ ಜವಾಬ್ದಾರಿಯನ್ನು ನಿರ್ವಹಿಸಿ ಸದಾ ಕಾಲದಲ್ಲಿಯೂ ನ್ಯಾಯ ದೊರಕಿಸುವುದಕ್ಕೆ ಸಾಧ್ಯವೇ ಎಂಬುದನ್ನು ಅವಲೋಕಿಸಿದರೆ ಈ 14 (2)ನೆಯ ನಿಧಿಯನ್ನು ಕೈ ಬಿಡುವುದು ಸೂಕ್ತವೆಂದು ತೋರುತ್ತದೆ.

ಇನ್ನು ಹಣವನ್ನು ವಸೂಲು ಮಾಡುವ ಬಗ್ಗೆ, ಶ್ರೀ ಎ. ಭೀಮಪ್ಪನಾಯಕರು ಹೇಳಿರುತ್ತಾರೆ, ಯಾರು cheats ಆಗಿರುತ್ತಾರೆಯೋ, ಯಾರು ಹಣ ದುರುಪಯೋಗ ಪಡಿಸುತ್ತಾರೆಯೋ ಅವರಿಗೆ ಉಗ್ರವಾದ ರೀತಿಯಲ್ಲಿ ಶಿಕ್ಷೆ ಮಾಡುವ ವಿಚಾರದಲ್ಲಿ ಯಾರದೂ ಅಭ್ಯಂತರವಿರಬಾರದೆಂದು. ಇದನ್ನು ಒಪ್ಪತಕ್ಕದ್ದೇ ಆದರೂ, ರಿಜಿಸ್ಟ್ರಾರ್‌ರವರಿಗೆ magisterial power ಕೊಡುವ ನೂಚನೆ ಒಂದು ಉಗ್ರವಾದ ತಿದ್ದುಪಡಿಯೆಂದು ನಾನು ಭಾವಿಸುತ್ತೇನೆ. ರೈತರಿಗೆ ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕೆಂಬ ಆತುರದ ಸೋಗಿನಲ್ಲಿ ಸರ್ಕಾರದವರು ಈಗಿರತಕ್ಕ ಸಹಕಾರ ಸಂಘಗಳ ಸ್ವರೂಪವನ್ನೇ ಬದಲಾಯಿಸಲು ತೊಡಗಿರುತ್ತಾರೆ. ವ್ಯವಸಾಯಗಾರರು ಎಂಥ ಕಷ್ಟ ಪರಿಸ್ಥಿತಿಯಲ್ಲಿರುತ್ತಾರೆಂಬುದನ್ನು ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸಬೇಕು.

Sri Kadidal MANJAPPA (Minister for Revenue and Public Works).—I want to know whether it is the intention of the Hon'ble Member that moneys paid to agriculturists by way of loan should not be recovered.

ಶ್ರೀ ಎಸ್. ಗೋಪಾಲಗೌಡ.—ಅಂಥ ಅಭಿಪ್ರಾಯವನ್ನು ಕೊಡುವುದಕ್ಕೆ ನಾನೇನು ಹುಚ್ಚನೇ, ಸ್ವಾಮಿ!

ಆ ದುರುದ್ದೇಶ ಯಾರಿಗೂ ಇರುವುದಕ್ಕೆ ಸಾಧ್ಯವಿಲ್ಲ. ನನ್ನ ಉದ್ದೇಶ ಅದಲ್ಲ. ಅವರಿಗೆ ಸಾಲಕೊಟ್ಟು.....

ಶ್ರೀ ಎ. ಭೀಮಪ್ಪನಾಯಕ್.—ಬಹಳ ನಿಧಾನವಾಗಿ, ಮೆತ್ತಗೆ, ಅವರು ಕೊಟ್ಟಷ್ಟು ವಸೂಲು ಮಾಡಿಕೊಳ್ಳಲಿ ಎಂಬುದು ತಮ್ಮ ಉದ್ದೇಶವೇ ? (ನಗು !)

Mr SPEAKER.—I request the Hon'ble Member to conclude his speech.

Sri J. MOHAMED IMAM.—Interruptions like this are made by them and yet they say that much time has been taken by this side.

ಶ್ರೀ ಎಸ್. ಗೋಪಾಲಗೌಡ.—ಈ ಹಣವನ್ನು ವಸೂಲು ಮಾಡುವುದಕ್ಕೆ ಸಹಕಾರ ಸಂಘದ ಪರವಾಗಿ ಅಧಿಕಾರಿಗಳು ಈ ರೈತನು ಇರುವ ಪ್ರದೇಶಕ್ಕೆ ಸಹ ಹೋಗಬೇಕಾಗುತ್ತದೆ, ಆದ್ದರಿಂದ ಈ ಹಣ ವಸೂಲುಮಾಡುವಾಗ ಅವನು ಜೈಲಿಗೆ ಕೂಡ ಹೋಗಬೇಕಾಗುತ್ತದೆ ಎಂದು ಹೇಳಿದರೆ ಬಹುಶಃ ಅದು ಮ್ಯಾಜಿಸ್ಟ್ರೇಟರು ಯಾವರೀತಿ ಫೈನ್ ಹಾಕುತ್ತಾರೆಯೋ ಆ ರೀತಿ ಎಂದರೆ ಏನು ಎಂಬುದು ತಮಗೇ ಗೊತ್ತಿದೆ. ಆದ್ದರಿಂದ ಇಂಥ ಒಂದು ಉಗ್ರವಾದ ಕಾನೂನನ್ನು ಮಾಡಿದ್ದೇ ಆದರೆ ಈ ಡಿಫಾಲ್ಟರುಗಳು ಜೈಲಿಗೂ ಹೋಗಬೇಕಾಗುತ್ತದೆ. ಈಗ ಇರುವುದು ಎರಡೇ ಮಾರ್ಗ. ಒಂದು ಡಿಫಾಲ್ಟರುಗಳಾಗದಂತೆ ಹಣ ಕಟ್ಟಿಬಿಡಬೇಕು; ಇಲ್ಲವೇ ಈ ಸಾಲವೇ ಬೇಡ ಎಂದು ನಮ್ಮನೆ ಇರಬೇಕು. ಏಕೆಂದರೆ ಸಾಲ ಮಾಡಿದವನು ಕ್ರಮವಾಗಿ ಕೊಟ್ಟಿರುವುದು ಈಗಿರುವ ಪರಿಸ್ಥಿತಿಯಲ್ಲಿ ಬಹಳ ಕಡಮೆ ಉದಾರಣೆಗಳು ಸಿಕ್ಕಿವೆ. ಈಗ ಸಾಲ ತೆಗೆದುಕೊಂಡ ಕೂಡಲೇ ಅವನ ಜೀವನದಲ್ಲಿ ಬೆಳಕು ಹುಟ್ಟಿ, ಅವನ ಸ್ಥಿತಿ ಉತ್ತಮವಾಗಿ ತಿಂಗಳು ತಿಂಗಳಿಗೆ ಸಂಬಳ ತೆಗೆದುಕೊಂಡಂತೆ ಹಣ ಗಳಿಸಿಕೊಳ್ಳುವಂತಾಗುತ್ತಾನೆ ಎಂಬುದು ಅಸಾಧ್ಯವಾದ ಮಾತು. ಈಗ ಮಾರ ಜೋರಿಯಂ ಆಕ್ಟು ತರುವ ಹಾಗೆ ಕಾಣುವುದಿಲ್ಲ. ಇದನ್ನು ಮತ್ತೆ ಮತ್ತೆ ಏಕೆ ಹೇಳುತ್ತೇನೆ ಎಂದರೆ ಅದರ ಅಗತ್ಯತೆ ಇಲ್ಲ ಎಂದು ತಾವು ಮನಗಂಡಿದ್ದೀರಿ. ಅಗತ್ಯತೆ ಇದೆ ಎಂಬುದನ್ನು ಮನಗಾಣಿಸಬೇಕೆಂದು ಹೇಳುತ್ತಾ ಇದ್ದೇನೆ. ಈ ಪರಿಸ್ಥಿತಿಯಲ್ಲಿ ಸಾಲ ತೆಗೆದುಕೊಂಡವನು ಆ ಬಗ್ಗೆ ಕಂತು ಕೊಡದೇ ಇದ್ದರೆ ಜೈಲಿಗೆ ಹೋಗಬೇಕಾಗುತ್ತದೆ. ಆದ್ದರಿಂದ ಅವನು ಭಯ ಪಡಬಹುದು ; ಸೊಸೈಟಿ ಸಾಲ ಎಂದರೆ ಸಾಕಪ್ಪಾ ಸಾಕು, ನಮಸ್ಕಾರ ಎಂದು ಹೇಳಬಹುದು. ಶ್ರೀ ದೇವರಾಜ ಅರಸ್‌ರವರು ಅವರ ಕಾರ್ಪಸ್ಟ್ ಫಂಡ್ಯಾಯನ್ನಿಯ ಒಂದು ಸೊಸೈಟಿಯಲ್ಲಿ ಷೇರು ಹಣ ಎಷ್ಟು ಬರಬೇಕೋ ಅಷ್ಟಾದರೂ ಕೊಡಿಸಿಕೊಡಿ ಎಂದು ಕೇಳುತ್ತಾ ಇದ್ದಾರೆ ಎಂದು ಹೇಳಿದರು. ಇಲ್ಲಿರತಕ್ಕ ಅವ್ಯವಸ್ಥೆಯನ್ನು ನೋಡಿ ಹೆದರಿ ಹೋಗಿದ್ದಾರೆ. ಈಗ ಇನ್ನೂ ಉಗ್ರವಾದ ಕಾರ್ಯಕ್ರಮ ತನ್ನಮೇಲೆ ಜಾರಿಗೆ ಬರುವುದು ಇದೆ ಈ ತಿದ್ದುಪಡಿಯಿಂದ ಎಂಬುದನ್ನು ಆತ ತಿಳಿದುಕೊಂಡರೆ ಈ ಸಹಕಾರ ಸಂಘದ ವ್ಯವಸ್ಥೆಗೆ ನಮಸ್ಕಾರ ಹಾಕಿ ಹಿಂದಕ್ಕೆ ಹೋಗುತ್ತಾನೆಯೋ ಏನೋ. ಆದ್ದರಿಂದ ಸಹಕಾರ ಸಂಘದ ಅಭಿವೃದ್ಧಿಯಾಗುವುದಕ್ಕೆ ಬದಲಾಗಿ ಅದಕ್ಕೆ ಮತ್ತಷ್ಟು ಅಸಹಕಾರ ಜನತೆಯಲ್ಲಿ ದೊರೆಯಬಹುದು ಎಂಬ ಮತ್ತೊಂದು ದೊಡ್ಡ ಶಂಕೆ ನಮಗೆ ಇರತಕ್ಕದ್ದು. ಇರತಕ್ಕ ಸಹಕಾರದ ವ್ಯವಸ್ಥೆಯನ್ನು ಇಷ್ಟುಮಟ್ಟಿಗೆ ಉಗ್ರವಾಗಿ ತಿದ್ದುಪಡಿ ಮಾಡುವ ಅವಸರದಲ್ಲಿ ಸರ್ಕಾರದವರು ಮತ್ತು ಈ ತಿದ್ದುಪಡಿ ಮಸೂದೆಯನ್ನು ತಂದಿರತಕ್ಕ ಮಾನ್ಯ ಸಚಿವರು ಕೂಲಂಕಷವಾಗಿ ವಿಚಾರಮಾಡಿ ಈ ಘನ ಉದ್ದೇಶಗಳು ಸಾರ್ಥಕವಾಗುವ ರೀತಿಯಲ್ಲಿ ತಿದ್ದುಪಡಿ ಮಾಡಬೇಕು ಮತ್ತು ರೈತನಿಗೆ ಯಾವರೀತಿ ಬೇಕೋ ಆ ರೀತಿ ತಾವು ನೇರವಾಗಿ ಅವನ ಬೆಳೆಯಮೇಲೆ ಸಾಲ ಕೊಟ್ಟು-ಬೆಳೆಯನ್ನು ಬೇಕಾದರೆ ತಾವು ಕೊಂಡುಕೊಳ್ಳಬಹುದು, 500 ರೂಪಾಯಿ ಸಾಲ ಕೊಟ್ಟು ಅವನು 10 ಪಲ್ಲಾ ಬತ್ತ ಬೆಳೆದಿದ್ದರೆ ಆ 10 ಪಲ್ಲಾ ಬತ್ತ ಕಟಾವು ಮಾಡಿಕೊಳ್ಳಬಹುದು—ಅಂಥ ವ್ಯವಸ್ಥೆ ಮಾಡಿ ಬಡವರಾಗಿರತಕ್ಕ, ಭೂಮಿ ಇಲ್ಲದೇ ಇರತಕ್ಕ ರೈತರಿಗೆ ಮತ್ತು ಯಾರು ಗೇಣಿ, ಗುತ್ತಿಗೆ ಮಾಡುತ್ತಾರೋ ಅಂಥ ರೈತರಿಗೆ—4.6 ಲಕ್ಷ ಜನ ಇದ್ದಾರೆ—ಅಂಥವರಿಗೆ ಈ ವ್ಯವಸ್ಥೆಯಿಂದ ಏನಾದರೂ ಉಪಯೋಗವಾಗುವ ರೀತಿಯಲ್ಲಿ ಮಾಡಬೇಕು.

ಮತ್ತೊಂದು ಅಂಶ ಏನೆಂದರೆ, ತಾವು 10 ಸಾವಿರ ರೂಪಾಯಿಗಳವರೆಗೂ ಷೇರು ಹಾಕಬಹುದೆಂಬ ಅಭಿಪ್ರಾಯವನ್ನು ಹೇಳಿದಿರಿ. ಇದರಿಂದ ಸರ್ಕಾರದವರು ಮತ್ತು ಸಾಹುಕಾರರು ಹಣ ಹಾಕಿ ಷೇರುಗಳನ್ನು ಕೊಂಡುಕೊಳ್ಳಲಿಕ್ಕೆ ಹೆಚ್ಚು ಅನುಕೂಲವಾಗುತ್ತದೆಯೇ ಹೊರತು ಬಡವರಿಗೆ ಸಾಧ್ಯವಿಲ್ಲ. ಬಡವರು ಹೆಚ್ಚು ಸಂಖ್ಯೆಯಲ್ಲಿ ಇದ್ದಾರೆ; ಅವರೆಲ್ಲರಿಗೂ ಒಮ್ಮೆಗೇ ಸಹಾಯ ಮಾಡಬೇಕೆಂದರೆ ತಮಗೂ ಕಷ್ಟವಿದೆ, ಅದು ನಮಗೂ ಗೊತ್ತು. ಆದರೆ ಅವರನ್ನು ಕೈ ಬಿಡತಕ್ಕ ನೀತಿ ಸರಿಯಾಗುವುದಿಲ್ಲ. ತಾವು ಖರ್ಚು ಮಾಡತಕ್ಕ ಕೋಟಿ ಕೋಟಿ ರೂಪಾಯಿಗಳಲ್ಲಿ ನಾಲ್ಕು ಕಾಸಿನ ಸೌಲಭ್ಯ ಅವರಿಗೆ ತಮ್ಮ ಸಹಕಾರ ಸಂಸ್ಥೆಗಳ ಮುಖಾಂತರ ದೊರೆಯುವಂತಾಗುವ ತಿದ್ದುಪಡಿ ಮಸೂದೆ ಈ ನಭೆಯ ಮುಂದೆ ಬಂದರೆ ಅದಕ್ಕೆ ಒಂದು ಹೆಚ್ಚಿನ ಸಹಕಾರ ದೊರೆಯುತ್ತದೆ, ಮತ್ತ ಸರ್ಕಾರದಲ್ಲೂ ಸಹ ಜನರಿಗೆ ಒಂದು ವಿಶ್ವಾಸವುಂಟಾಗುತ್ತದೆ. ಆದರಿಂದ ತಮ್ಮ ಉದ್ದೇಶ ಸ್ವಲ್ಪಮಟ್ಟಿಗೂ ಸಾರ್ಥಕವಾಗಬಹುದು ಎಂದು ಹೇಳಿ, ಹೆಚ್ಚುಕಾಲ ಇಲ್ಲದೇ ಇರುವುದರಿಂದ, ಹಳೆಯ ಆಕ್ಟನ್ನೂ ತಿದ್ದುಪಡಿಯನ್ನೂ ಹೋಲಿಸಿ ವಿಚಾರ ಮಾಡುವಷ್ಟು ವ್ಯವಧಾನವಿಲ್ಲದೆ ಇರುವುದರಿಂದ, ಮತ್ತು ಸರ್ಕಾರದವರು ಆತುರವಾಗಿದ್ದಾರೆ, ರೈತರಿಗೆ ಒಳ್ಳೆಯದು ಮಾಡುತ್ತಾರೆ ಅದಕ್ಕೆ ಅಡ್ಡಿ ಬರಬೇಡಿ ಎಂದು ಅಧ್ಯಕ್ಷರು ಭರವಸೆ ಕೊಟ್ಟಿರುವ ಮೇರೆಗೆ ಆ ಮಾತಿನಲ್ಲಿ ನಂಬಿಕೆ ಇಟ್ಟು ಕೊಂಡು, ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಸಾಕಾದಷ್ಟು ಚರ್ಚೆ ಆಗಿರುವುದರಿಂದ ಚರ್ಚೆ ಆಖ್ಯೆರು ಮಾಡಬೇಕೆಂದು ಸೂಚನೆ ಮಾಡುತ್ತೇನೆ.

Mr. SPEAKER.—There is a closure motion. The question is :

"That the question be now put."

The motion was adopted.

Mr. SPEAKER.—The Hon'ble Minister will now reply.

Dr. R. NAGAN GOWDA.—Mr. Speaker, I wanted to speak and meet some of the points that have been raised. Since it is very late, I have noted in detail all the points that have been raised by the

(DR. R. NAGAN GOWDA.)

Hon'ble Members regarding the theory and practice of co-operation and I will keep them in mind while this Bill is considered by the Select Committee.

I therefore request you to put the motion that I have moved to the vote of the House and I hope the Hon'ble House will support the motion for the reference to the Joint Select Committee.

MR. SPEAKER.—The question is :

"That this House concurs in the appointment of a Joint Select Committee consisting of a total number of twelve members, four members from the Council and eight members from the Assembly, to consider the Mysore Co-operative Societies (Amendment) Bill, 1954 and that the following members shall be the members of the Joint Select Committee :

Sri G. Narayana Gowda, Sri Duggappa, Sri Mudduramiah, Sri V. Masiyappa, Sri T. Mariappa, Sri G. Basappa, Sri S. Srinivasa Iyengar, Sri B. P. Nagaraja Murthy."

The motion was adopted.

The Hon'ble Minister for Agriculture will be a Member of the Joint Select Committee.

MR. SPEAKER—Now the House is adjourned *sine die.*

The House adjourned sine die *at Thirty Minutes past Twelve of the Clock.*